# ಭಾರತೀಯ ಪೌರ ಶಿಕ್ಷಣದಲ್ಲಿ

# ಹಳೆಯ ಮತ್ತು ಹೊಸ ಸಂದಿಗ್ಧತೆಗಳು

## (Old and New Dilemmas in Indian Civic Education)

**ಅಮನ್ ಮದಾನ್**

ಪೌರ ಶಿಕ್ಷಣವು, ಸಾರ್ವಜನಿಕ ರಂಗದಲ್ಲಿ ಬದುಕಿನ ಬಗ್ಗೆ ಕಲಿಯುವ ಅವಕಾಶಕ್ಕೆ ಸಂಬಂಧಪಟ್ಟುದಾಗಿದೆ. ಇದು ಸ್ಥಳೀಯ ಮತ್ತು ವೈಯಕ್ತಿಕ ನೆಲೆಯಲ್ಲಿ ಖಚಿತವಾಗಿ ಬೇರ್ಪಟ್ಟುದಲ್ಲವಾದರೂ ಇದು ಅನೇಕ ಹೊಸ ಸಂಬಂಧಗಳು ಮತ್ತು ತಂತ್ರಗಳನ್ನು ಒಳಗೊಂಡಿದೆ. ಸಾರ್ವಜನಿಕ ರಂಗದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಕುರಿತು ವಿವಿಧ ಸಾಂಸ್ಕೃತಿಕ ನಿಲುವುಗಳು ಅಸ್ತಿತ್ವದಲ್ಲಿವೆ. ಭಾರತೀಯ ಪೌರ ಶಿಕ್ಷಣದ ಕುರಿತ ಮರುಚಿಂತನೆಯಲ್ಲಿ ಎರಡು ಬಗೆಯ ಸವಾಲುಗಳಿವೆ: (a) ಅಸ್ತಿತ್ವದಲ್ಲಿರುವ ಸಾರ್ವಜನಿಕ ವರ್ತನೆಯ ವಿವಿಧ ರೂಢಮಾದರಿಗಳನ್ನು ಪರಿಗಣಿಸುವುದು ಹೇಗೆ? (b) ಯಾವುದೇ ನಿರ್ದಿಷ್ಟ ರೂಢಮಾದರಿಯ ಮೂಲತತ್ವಗಳು ಯಾವುವು ಮತ್ತು ಅವುಗಳನ್ನು ಹೇಗೆ ವಿಶದೀಕರಿಸಿ ಜೀವಂತ ಅರ್ಥವನ್ನು ನೀಡಬಹುದು?

ಪೌರ ಶಿಕ್ಷಣವು ಶಾಲೆ ಮತ್ತು ಪ್ರಭುತ್ವದ ನಡುವಿನ ಸಂಬಂಧದ ಅಂತಸ್ಸಾರವಾಗಿದೆ. ಇದು ಭಾರತ ಪ್ರಭುತ್ವದೆಡೆಯಲ್ಲಿ ಸಮಾಜದ ಗುಣಲಕ್ಷಣಗಳನ್ನು ಮತ್ತು ಬಂಡವಾಳಶಾಹಿ ವ್ಯವಸ್ಥೆ ಮತ್ತು ಆಧುನಿಕತೆಯೊಂದಿಗೆ ಬಂದಿರುವ ಬದಲಾವಣೆಗಳ ಮೂಲಭೂತ ಅರ್ಥೈಸುವಿಕೆಯನ್ನು ಧ್ವನಿಸುತ್ತದೆ. ಇದು ಸಂಘಪರಿವಾರ ಪ್ರೇರಿತ ಶಾಲಾ ಪಠ್ಯಕ್ರಮವನ್ನು ತಿದ್ದುವ ಪ್ರಮುಖ ವಿಚಾರವಾದ ನೈತಿಕ ಅಧಃಪತನದೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಈ ಪ್ರಶ್ನೆಯನ್ನು ಉದ್ದೇಶಿಸುವ ಸಲುವಾಗಿ, ಎನ್‌ಸಿಇಆರ್‌ಟಿ (NCERT - National Council of Educational Research and Taining)ಯು, ಸಾಮಾಜಿಕ ವಿಜ್ಞಾನ ಕ್ಷೇತ್ರವನ್ನು ನಿರ್ಲಕ್ಷಿಸಿ ಪೌರನೀತಿ ಶಿಕ್ಷಣದ ಪಠ್ಯಕ್ರಮವನ್ನು ವಿಸ್ತರಿಸಿದೆ. ಭಾರತೀಯ ಶಿಕ್ಷಣ ವ್ಯವಸ್ಥೆಯ ಒಂದು ವರ್ಗವು ತಮಗಿರುವ ಸಾರ್ವಜನಿಕ ನೈತಿಕತೆಯೊಂದಿಗಿನ ಅಸಮಾಧಾನವನ್ನು ತಣಿಸಲು ಪೌರನೀತಿಯನ್ನು ಅವಲಂಬಿಸುತ್ತದೆ. ಇಂತಹ ಹಿನ್ನೆಲೆಯಲ್ಲಿ ಮತ್ತು ಮಾನವಶಾಸ್ತ್ರೀಯ ದೃಷ್ಟಿಕೋನದಿಂದ ಪೌರ ಶಿಕ್ಷಣದ ಸಾಮಾಜಿಕ ಮತ್ತು ರಾಜಕೀಯ ಮೂಲಗಳ ಪರಿಶೀಲನೆ ನಡೆಸಲು ನಾವು ಯತ್ನಿಸುತ್ತಿದ್ದೇವೆ.

ಸಾಮಾಜಿಕ ವೈರುಧ್ಯಗಳು ಮತ್ತು ಸಂಘರ್ಷಗಳು ಶೈಕ್ಷಣಿಕ ಪ್ರಕ್ರಿಯೆಯ ಮೂಲ ಅಂಶವೆಂಬುದನ್ನು ಪ್ರಾರಂಭದಲ್ಲಿಯೇ ಗುರುತಿಸಬೇಕಾದುದು ತೀರಾ ಅತ್ಯಗತ್ಯ. ಭಾರತ ಅಥವಾ ಪ್ರಪಂಚದ ಯಾವುದೇ ಮೂಲೆಯಲ್ಲಿನ ಶಿಕ್ಷಣವು ಸಮಾಜದ ರಚನೆ ಮತ್ತು ಪುನರ್ರಚನೆಯನ್ನು ಒಳಗೊಂಡಿದೆ. ಒಂದು ಸಮಾಜದ ಗುಣಲಕ್ಷಣವು ಅದರ ಶಿಕ್ಷಣ ವ್ಯವಸ್ಥೆಗಳನ್ನು ನಿರ್ಧರಿಸುತ್ತದೆ ಮತ್ತು ಶಿಕ್ಷಣ ವ್ಯವಸ್ಥೆಯೇ ಬದಲಾವಣೆಯ ಶಕ್ತಿಗಳು ಅತ್ಯಂತ ಕಹಿ ಸಂಘರ್ಷದಲ್ಲಿ ನಿರತರಾಗಿರುವ ಮುಖ್ಯ ಕಾರಣವಾಗಿದೆ. ಶಿಕ್ಷಣದ ಮೂಲಕ ಸಾಮಾಜಿಕ ಬದುಕನ್ನು ನಿರಂತರವಾಗಿ ಮರುಸೃಷ್ಟಿ ಮಾಡುವ ಪ್ರಕ್ರಿಯೆಗೆ ಬದಲಾಗುತ್ತಿರುವ ಸಾಮಾಜಿಕ ಸಂರಚನೆ, ಶೈಕ್ಷಣಿಕ ಪ್ರತಿಷ್ಠಾಪನೆಗಳು, ಇವುಗಳ ಮೇಲೆ ಪ್ರಾಬಲ್ಯ ಮೆರೆಯುವ

ಸಿದ್ಧಾಂತಗಳು, ಆಕಾರ ನೀಡುತ್ತವೆ. ಜೊತೆಗೆ ವಿವಿಧ ಶಕ್ತಿಗಳನ್ನು ಒಟ್ಟಾಗಿ ಹಿಡಿದಿಟ್ಟುಕೊಳ್ಳಬಲ್ಲ ಸಂಬಂಧಗಳು, ಮುಖ್ಯವಾಗಿ ಅಧಿಕಾರದ ಸಂಬಂಧಗಳು ಸಹ ಈ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಶಿಕ್ಷಣದಲ್ಲಿ ಅಧಿಕಾರದ ಪಾತ್ರಕ್ಕೆ ಹೆಚ್ಚು ಗಮನ ನೀಡದಿರುವ ಪ್ರವೃತ್ತಿ ಇದೆ. ಆದಾಗ್ಯೂ, ಅಧಿಕಾರದ ಸ್ವರೂಪ ಮತ್ತು ಬಾಹ್ಯರೇಖೆಗಳು ಶಿಕ್ಷಣದ ಮೂಲ ಅಡಿಪಾಯವೆನಿಸಿವೆ. ಶಿಕ್ಷಣವು ಕೇವಲ ಅಧಿಕಾರ ಗಳಿಸಲು ಇರುವ ಸಾಧನವಷ್ಟೇ ಎಂದು ಹೇಳಲಾಗದು. ಬದಲಾಗಿ ಅಧಿಕಾರದ ಸಂಬಂಧಗಳು ಶಿಕ್ಷಣದಲ್ಲಿ ಉಂಟಾಗುವ ಎಲ್ಲಾ ವಿಚಾರಗಳ ಜೊತೆ ಆಳವಾಗಿ ಹೆಣೆದುಕೊಂಡಿವೆ ಎಂದು ಹೇಳಬಹುದು. ಆದರೆ ಅದು ಯಾವಾಗಲೂ ಕೆಲವು ನಿರ್ದಿಷ್ಟ ರೀತಿಯ ವರ್ತನೆಗಳು ಇತರ ವರ್ತನೆಗಳಿಗಿಂತ ಉತ್ತಮವೆಂಬ ಪ್ರತಿಪಾದನೆಗಳೇ ಆಗಿವೆ.

ಹೀಗೆ ಶಿಕ್ಷಣವು ಮೂಲತಃ ಸಾಂಸ್ಕೃತಿಕ ಅಧಿಕಾರವನ್ನು ಪ್ರತಿಪಾದಿಸುವುದಾಗಿದೆ. ಉದಾಹರಣೆಗೆ, ನಿರ್ದಿಷ್ಟ ರೀತಿಯಲ್ಲಿ ಮಾತನಾಡುವುದು ನಿಮ್ಮ ಪೋಷಕರು ಕಲಿಸಿರಬಹುದಾದ ರೀತಿಗಿಂತ ಒಳ್ಳೆಯದು, ಪ್ರಭುತ್ವದ ನಿಯಮಗಳು ನೀವು ಹಾದಿಬೀದಿಗಳಲ್ಲಿ ಕಲಿಯುವ ನಿಯಮಗಳಿಗಿಂತ ಒಳ್ಳೆಯವು, ಇತ್ಯಾದಿ. ಇವುಗಳನ್ನು ಯಾವಾಗಲೂ ಪ್ರತಿ ಯೋಜನೆಗಳ ವಿರುದ್ಧ ಮತ್ತು ಸಂಧಾನದ ಮೂಲಕ ಸಾಧಿಸಬೇಕಾಗುತ್ತದೆ. ಭಾರತೀಯ ಶಿಕ್ಷಣ ಮತ್ತು ಸಮಾಜದ ಮೇಲೆ ಇದು ಬೀರುವ ಪರಿಣಾಮವನ್ನು ಕುರಿತು ಮರುಚಿಂತನೆ ನಡೆಸಬೇಕಾದರೆ, ಶಿಕ್ಷಣ ತಜ್ಞರು ಏನು ಹೇಳಲು ಇಚ್ಛಿಸುತ್ತಾರೆ ಮತ್ತು ಅವರು ಯಾವುದರ ವಿರುದ್ಧ ಹೇಳುತ್ತಿದ್ದಾರೆ ಎಂಬ ಎರಡೂ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

## ಶಾಲೆಯಲ್ಲಿನ ವಿವಿಧ ಸಂಸ್ಕೃತಿಗಳು

ಸಾಮಾನ್ಯವಾಗಿ ಶಾಲೆಯಲ್ಲಿ ಸಾಂಸ್ಕೃತಿಕ ರಾಜಕೀಯವು ಅಸ್ತಿತ್ವದಲ್ಲಿದೆ ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಪರಿಕಲ್ಪನೆಗಳು ಮತ್ತು ಕೌಶಲ್ಯಗಳನ್ನು ಕಲಿಸುವಲ್ಲಿ ಇರುವ ಸಮಸ್ಯೆಗಳನ್ನು ಸಾಂಪ್ರದಾಯಿಕವಾಗಿ ಬೋಧನಾ ವಿಧಾನದ ಪ್ರಶ್ನೆಗಳನ್ನಾಗಿ ಪರಿಗಣಿಸಲಾಗುತ್ತದೆ. ಇಲ್ಲಿ, ನಾವು ಶಿಕ್ಷಣ ಮತ್ತು ಅದರ ಸಾಂಸ್ಥೀಕರಣವನ್ನು ಶಾಲೆಗಳ ರೂಪದಲ್ಲಿ ನೋಡುತ್ತೇವೆ, ಅಲ್ಲಿ ವಿಭಿನ್ನ ಸಂಸ್ಕೃತಿಗಳು ತಮ್ಮ ವಿರೋಧಾಭಾಸಗಳನ್ನು ಸಂವಾದಿಸುವ ಮತ್ತು ಮಾತುಕತೆ ನಡೆಸುವ ಸಾಂಸ್ಕೃತಿಕ ರಾಜಕೀಯದ ಅಖಾಡವಾಗಿ ಪರಿಭಾವಿಸುತ್ತೇವೆ. ಈ ಸಾಂಸ್ಕೃತಿಕ ರಾಜಕಾರಣದ ತಿಳುವಳಿಕೆಯು ವಿಭಿನ್ನ ಇತಿಹಾಸಗಳು, ಐಡಿಯಾಲಜಿಗಳು ಮತ್ತು ಪರಸ್ಪರ ಸಂಸ್ಕೃತಿಗಳನ್ನು ರೂಪಿಸುವ ವಸ್ತು ಪರಿಸ್ಥಿತಿಗಳು, ಹಾಗೆಯೇ ನಡೆಯುತ್ತಿರುವ ಸಂಧಾನಗಳ ನಿಯಮಗಳನ್ನು ನೋಡತಕ್ಕದ್ದು.

ಒಂದು ಹಂತದಲ್ಲಿ ಶಾಲೆಯಲ್ಲಿ ಕಂಡುಬರುವ ಸಾಂಸ್ಕೃತಿಕ ವೈರುಧ್ಯಗಳನ್ನು ಎರಡು ಧ್ರುವಗಳಾಗಿ ನೋಡಬಹುದು. ಇದನ್ನು ಎ.ಕೆ. ರಾಮಾನುಜನ್ (A.K. Ramanujan) (೧೯೯೦) ಅವರು ಅತ್ಯಂತ ಸ್ಪಷ್ಟವಾಗಿ ವಿವರಿಸಿದ್ದಾರೆ. ಭಾರತದಲ್ಲಿ ಇರುವಂತಹ ಸಂಸ್ಕೃತಿಗಳು ಸಂದರ್ಭಗಳಿಗೆ ಸಂವೇದನಾಶೀಲವಾದ ನಿಯಮಗಳ ಪ್ರಕಾರ ಚಿಂತಿಸುತ್ತವೆ ಎಂದು ಅವರು ಬರೆದಿದ್ದಾರೆ. ನಿರ್ದಿಷ್ಟ ರಾಗಗಳನ್ನು ನಿರ್ದಿಷ್ಟ ಸಮಯದಲ್ಲಿ ಹಾಡಬೇಕಾಗುತ್ತದೆ; ಕೆಲವು ಆಹಾರಗಳನ್ನು ನಿರ್ದಿಷ್ಟ ವಿಧಾನದಲ್ಲಿ ಸೇವಿಸಬೇಕಾಗುತ್ತದೆ; ಅಚಲತೆಯು ಕ್ಷತ್ರಿಯರ ಗುಣವಾದರೆ, ಗಾಳಿ ಬಂದ ಕಡೆ ವಾಲುವುದು ವೈಶ್ಯರ ಗುಣವಾಗಿದೆ. ಇದನ್ನು ವರ್ಣಾಶ್ರಮದಲ್ಲಿ ಮತ್ತು ತಮ್ಮದೇ ಆದ ಪದ್ಧತಿಗಳನ್ನು ಮತ್ತು ಇತರರ ಕುರಿತು 'ಸಹಿಷ್ಣುತೆ' ಹೊಂದಿರುವ ಭಿನ್ನ ಜಾತಿಗಳಾಗಿ ವಿಂಗಡಿಸಲಾದ ಸಮಾಜದಲ್ಲಿ ಸ್ಪಷ್ಟವಾಗಿ ನೋಡಬಹುದು. ಸಂದರ್ಭ ಮುಕ್ತ, ಸಾರ್ವತ್ರಿಕ ನಿಯಮಗಳ ಪ್ರಕಾರ ಚಿಂತಿಸುವ

ಪ್ರವೃತ್ತಿಯೂ ಜಾರಿಯಲ್ಲಿದೆ. ಆದರೆ ಇದಕ್ಕೆ ಹೆಚ್ಚು ಒತ್ತು ನೀಡಲಾಗದು. ಜಾಗತೀಕರಣ, ಬಂಡವಾಳಶಾಹಿ, ಆಧುನಿಕತೆ ಮತ್ತು ಸಮಕಾಲೀನ ಉದಾರವಾದೀಯ ಪ್ರಭುತ್ವವು ತಮ್ಮ ಪ್ರಾಬಲ್ಯವನ್ನು ಸಾಧಿಸಲು ಹೆಚ್ಚಾಗಿ ಸಂದರ್ಭ ಮುಕ್ತ, ಸಾರ್ವತ್ರಿಕತೆಯನ್ನು ಅವಲಂಬಿಸುತ್ತವೆ. ಪಾಶ್ಚಾತ್ಯರಲ್ಲಿ ಸಂದರ್ಭ ಮುಕ್ತ, ಸಾರ್ವತ್ರಿಕ ನಿಯಮಗಳನ್ನು ಹರಡುವ ಅನೇಕ ಶಕ್ತಿಯುತ ಯಾಜಮಾನ್ಯ ಪ್ರವೃತ್ತಿಗಳು ಇವೆ. ಇವು ಉತ್ತರ ಅಟ್ಲಾಂಟಿಕ್‌ನಲ್ಲಿ ಅಂಚಿನಲ್ಲಿರುವ ದೇಶಗಳಲ್ಲಿ (fringe countries) ಸಾಪೇಕ್ಷವಾಗಿ ವ್ಯಾಪಕವಾಗಿವೆ ಮತ್ತು ಇವುಗಳನ್ನು ಉತ್ತೇಜಿಸುವ ಶಕ್ತಿಯುತ ಯಾಜಮಾನ್ಯದ ಪ್ರವೃತ್ತಿಗಳೊಂದಿಗೆ ಇವು ನಿಕಟ ಸಂಬಂಧ ಹೊಂದಿರುವುದನ್ನು ಕಾಣಬಹುದು. ಭಾರತದಲ್ಲಿಯೂ ಸಾರ್ವತ್ರಿಕತೆಯು ದೀರ್ಘವಾದ ಇತಿಹಾಸವನ್ನು ಹೊಂದಿದೆ ಹಾಗೂ ಇದಕ್ಕೆ ಈಗ ಹೊಸ ಬೇರುಗಳು ಬೆಳೆಯುತ್ತಿವೆ. ಆದರೆ ಇದು ಇತರ ಪ್ರಭಾವಶಾಲಿ ಸಾಮಾಜಿಕ ವರ್ತನೆಯ ಮಾದರಿಗಳೊಂದಿಗೆ ಘರ್ಷಣೆಯಲ್ಲಿವೆ. ಶಾಲೆಯು ಒಂದು ನಿರ್ದಿಷ್ಟ ಸಾರ್ವತ್ರಿಕ ಸಂಪ್ರದಾಯದ ಭದ್ರ ನೆಲೆಯಾಗಿದ್ದು, ಅದು ಅನೇಕ ಸ್ಥಳೀಯ ಸಂಪ್ರದಾಯಗಳೊಂದಿಗೆ ಪರಸ್ಪರ ಸಂವಾದನ್ನು ನಡೆಸಬೇಕಾಗುತ್ತದೆ.

ನಾನು ವಾಸವಾಗಿರುವ ಸಣ್ಣ ಪಟ್ಟಣದಲ್ಲಿ ಅಥವಾ ಇದರ ಸುತ್ತ ಇರುವ ಹಳ್ಳಿಗಳತ್ತ ಕಣ್ಣು ಹಾಯಿಸಿದಾಗ, ಜನರು ವರ್ತನೆಯ ನಿರ್ದಿಷ್ಟ ಮಾದರಿಗಳನ್ನು ಹೆಚ್ಚಾಗಿ ನೆಚ್ಚಿಕೊಂಡಿರುವಂತೆ ಕಂಡುಬರುತ್ತದೆ. ನನಗೆ ತಿಳಿದಿರುವ ಹೆಚ್ಚಿನ ಜನರು, ಪಡಿತರ ಚೀಟಿ ಅಥವಾ ವಾಹನ ಚಾಲನಾ ಪರವಾನಗಿಯನ್ನು ಪಡೆಯಲು ಅಥವಾ ತಮ್ಮ ಕಟ್ಟಡದ ಯೋಜನೆಗೆ ಅಂಗೀಕಾರ ಪಡೆಯಲು ನೇರವಾಗಿ ಸರ್ಕಾರಿ ಅಧಿಕಾರಿಗಳ ಬಳಿ ಹೋಗುವುದಿಲ್ಲ. ಬದಲಾಗಿ ಜಾತಿ, ರಕ್ತಸಂಬಂಧ ಆಧಾರಿತ ತಮ್ಮ ಸಾಮಾಜಿಕ ಮಧ್ಯವರ್ತಿಗಳ ಜಾಲಗಳ ಮೂಲಕ ಸಹಾಯ ಪಡೆಯುತ್ತಾರೆ ಮತ್ತು ಈ ಕುಲ ಆಧಾರಿತ ಪಂಗಡಗಳಿಂದಾಚೆಗೆ ಇರುವ ಜನರ ಸಹಾಯಪಡೆಯಲು ತಮ್ಮ ಕೆಲಸ ಹಾಗೂ ಶಿಕ್ಷಣವು ಒದಗಿಸುವ ಅವಕಾಶಗಳನ್ನು ಬಳಸುವುದರ ಮೂಲಕ ಮುಂದುವರೆಯುತ್ತಾರೆ. ನಾನು ಯಾರಾದರೂ ಹೊಸಬರನ್ನು ಭೇಟಿಯಾದಾಗ ಅವರು ನನ್ನನ್ನು ನಾನು ಇಲ್ಲಿಗೆ ಹೊಸದಾಗಿ ವರ್ಗಾವಣೆಯಾದ ಸರ್ಕಾರಿ ಅಧಿಕಾರಿಯಾಗಿರಬಹುದು ಎಂದು ತಪ್ಪಾಗಿ ಭಾವಿಸುತ್ತಾರೆ ಮತ್ತು ನನಗೆ ತುಸು ಹೆಚ್ಚಿನ ವಿನಯವನ್ನೇ ತೋರಿಸುತ್ತಾರೆ. ಇಲ್ಲಿ ಯಾವುದೇ ದೊಡ್ಡ ಕೈಗಾರಿಕೆಯೂ ಇಲ್ಲ. ಈ ಪ್ರದೇಶದಲ್ಲಿ ಪ್ರಭುತ್ವವೇ ಏಕೈಕ ದೊಡ್ಡ ಸಂಸ್ಥೆಯಾಗಿದೆ. ನನ್ನ ಮಿತ್ರರೊಬ್ಬರು ನನಗೆ ನೀಡಿದ ಸಲಹೆಯೆಂದರೆ., ನೀವು ಎಲ್ಲರ ಜೊತೆ ಆದಷ್ಟು ನಯವಾಗಿಯೇ ಮಾತನಾಡಿ; ಅವರ ಸಹಾಯ ನಿಮಗೆ ಯಾವಾಗ ಬೇಕಾಗಬಹುದು ಎಂಬುದನ್ನು ಹೇಳಲಾಗದು.

ಆದರೂ, ಅದೇ ವೇಳೆ, ಅಸ್ತಿತ್ವದಲ್ಲಿರುವ ವರ್ತನೆಯಲ್ಲಿನ ನಿರ್ದಿಷ್ಟತೆಗಳು ವಿಘಟನೆ ಆಗುತ್ತಿರುವುದನ್ನು ನಾವು ಕಾಣಬಹುದು; ಮುಖ್ಯವಾಗಿ ವರ್ತನೆಯ ಕಟ್ಟುನಿಟ್ಟಿನ ನಿಯಮಗಳನ್ನು ಕುರಿತು ಈ ವಿಚಾರವು ನಿಜವೆನಿಸಿದೆ. ತಡೆಗಟ್ಟಲು ಸರ್ಕಾರದ ಕಾನೂನುಗಳ ಪ್ರಯತ್ನಗಳು ಏನೇ ಇರಲಿ, ಎಲ್ಲವೂ ಸಾಧ್ಯ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ನೀವು ಏನೆಲ್ಲ ಸಾಧಿಸಬಹುದು ಎಂಬುದು, ನೀವು ಒಟ್ಟುಗೂಡಿಸಬಹುದಾದ ಬೆಂಬಲವನ್ನು ಆಧರಿಸಿದೆ. ಅಲ್ಲದೆ ಒಬ್ಬ ದೊಡ್ಡ ಭೂಮಾಲೀಕ, ಒಬ್ಬ ದೊಡ್ಡ ವ್ಯಾಪಾರಿ, ಒಬ್ಬ ಚಿಲ್ಲರೆ ವ್ಯಾಪಾರಿ ಮತ್ತು ಒಬ್ಬ ಭೂರಹಿತ ದಲಿತ ಕಾರ್ಮಿಕನಿಗೆ ಲಭ್ಯವಿರುವ ಅನುಕೂಲತೆಗಳಲ್ಲಿ ಸ್ಪಷ್ಟವಾದ ಭಿನ್ನತೆಗಳಿವೆ. ಇವೆಲ್ಲವೂ, ಕೆಲವರಿಗೆ ವಿಶೇಷ ರಕ್ಷಣೆ ಒದಗಿಸಿ, ಎಲ್ಲರೂ ಸಮಾನರೆಂದು ಹಾಗೂ ಮಿತಿಗಳು ಮತ್ತು ಹಕ್ಕುಗಳನ್ನು ಸ್ಪಷ್ಟವಾಗಿ ನಿರೂಪಿಸಿರುವ ಕಾನೂನಿಗೆ ಒತ್ತು ನೀಡುವ ಭಾರತ ದೇಶದ ಉದಾರವಾದಿ ತಳಪಾಯಕ್ಕೆ ತೀವ್ರವಾಗಿ ವ್ಯತಿರಿಕ್ತವಾಗಿರುವುದನ್ನು ತೋರಿಸುತ್ತದೆ. ಆಧುನಿಕತೆಯ ಸಾರ್ವತ್ರಿಕತೆಯನ್ನು ಇಲ್ಲಿ ಮನಃಪೂರ್ವಕವಾಗಿ ಸ್ವೀಕರಿಸಲಾಗಿಲ್ಲ ಮತ್ತು ಅದೇ ವೇಳೆ ಸಾಮಾಜಿಕ ವರ್ತನೆಯ ಹಳೆಯ ಅಂಶಗಳನ್ನು ನಿಧಾನ ಗತಿಯಲ್ಲಿ ಉಲ್ಲಂಘಿಸಲಾಗುತ್ತಿದೆ.

## ಪೌರನೀತಿಯಲ್ಲಿ ನಂಬಿಕೆ ಹೊಂದಿದವರು

ಅಂತಸ್ತಿನ ಗುಂಪು (status group)[1] ಎನ್ನುವ ಪರಿಕಲ್ಪನೆಯು ನಮ್ಮಂತಹ ಸಮಾಜವನ್ನು ಅರ್ಥೈಸಿಕೊಳ್ಳಲು ಒಂದು ಪ್ರಮುಖವಾದ ಸಾಧನವನ್ನು ಒದಗಿಸಿಕೊಡುತ್ತದೆ. ವಸಾಹತುಶಾಹಿ ಶಾಲಾವ್ಯವಸ್ಥೆಯು ಸೃಷ್ಟಿಸಿದ ಬುದ್ಧಿಜೀವಿ[2] ವರ್ಗವು, ಭಾರತೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಂಡುಬಂದ ಬದಲಾವಣೆಯ ಹಿಂದಿನ ಶಕ್ತಿಗಳನ್ನು ಅರಿತುಕೊಳ್ಳಲು ಪ್ರಮುಖ ಕೀಲಿಕೈ ಆಗಿದೆ. ಎಲ್ಲಾ ಅಂತಸ್ತಿನ ಗುಂಪಿನಂತೆಯೇ ಇವರನ್ನು ಸಹ ಶಾಲೆಗಳು ಮತ್ತು ವಿಶ್ವವಿದ್ಯಾನಿಲಯಗಳಿಗೆ ಪ್ರವೇಶಪಡೆದು ಅಲ್ಲಿನ ರೀತಿ-ರಿವಾಜುಗಳಿಂದ ಸಂಪೂರ್ಣ ಸಾಮಾಜೀಕರಣಗೊಂಡ ರೀತಿಯನ್ನು ಆಧರಿಸಿಯೇ ವ್ಯಾಖ್ಯಾನಿಸಬಹದು. ಈ ಬುದ್ಧಿಜೀವಿ ವರ್ಗವು ಬ್ರಿಟೀಷರು ಭಾರತಕ್ಕೆ ತಂದು ಪ್ರಭುತ್ವವು ಪ್ರಚಾರ ಮಾಡಿದ ಸಂಸ್ಥೆಗಳ ಮೂಲಕ ಪ್ರಚಾರಮಾಡಿದ ಸಂಸ್ಥೆಗಳು ಮತ್ತು ಉಪಸಂಸ್ಕೃತಿಗಳ ಆರಾಧಕರಾಗಿದ್ದರು. ಭಾರತದ ಬುದ್ಧಿಜೀವಿವರ್ಗವನ್ನು ಪ್ರಾದೇಶಿಕ ಮತ್ತು ರಾಷ್ಟ್ರೀಯ ವರ್ಗಗಳೆಂದೂ ವಿಂಗಡಿಸಬಹುದು. ರಾಷ್ಟ್ರೀಯ ವರ್ಗವು, ಇಂಗ್ಲಿಷ್ ಭಾಷೆಯ ಬಳಕೆಯ ಕಾರಣ, ದೀರ್ಘ ಕಾಲದವರೆಗೆ ಪ್ರಬಲ ಗುಂಪಾಗಿತ್ತು.

ಭಾರತದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ಅಧಿಕಾರದ ಗುಣಲಕ್ಷಣ ಮತ್ತು ಅದರ ಸಾಂಸ್ಥಿಕ ನಿರ್ವಾಹಕಗಳಲ್ಲಿ ಮೂಲಭೂತವಾದ ಬದಲಾವಣೆಗಳು ಘಟಿಸುತ್ತಿವೆ. ಬುದ್ಧಿಜೀವಿ ವರ್ಗದ ರಾಜಕೀಯ ಮತ್ತು ನೈತಿಕ ಬಿಕ್ಕಟ್ಟುಗಳಿಗೂ ಅವರಿಗೆ ಮತ್ತು ಅವರು ಬಲವಾಗಿ ನೆಚ್ಚಿಕೊಂಡಿರುವ ನಂಬಿಕೆಗಳಿಗೆ ಒಡ್ಡಲಾಗಿರುವ ಸವಾಲುಗಳಿಗೆ ನೇರ ಸಂಬಂಧವಿದೆ. ಭಾರತದ ರಾಜ್ಯದ ಆದರ್ಶಾತ್ಮಕ ರಚನೆಯನ್ನು ವಿವರಿಸುವ ಮತ್ತು ಸಮರ್ಥಿಸುವ ಐಡಿಯಾಲಜಿಗಳು ಹೆಚ್ಚಾಗಿ ವಿರೋಧಾತ್ಮಕ ಘಟನೆಗಳು ಮತ್ತು ಉಪಾಖ್ಯಾನಗಳೊಂದಿಗೆ ಮುಖಾಮುಖಿಯಾಗುತ್ತಿವೆ.

ಆರಂಭದಲ್ಲಿ ವಸಾಹತುಶಾಹಿ ವ್ಯವಸ್ಥೆ ಮತ್ತು ನಂತರ ಹೊಸದಾಗಿ ಉದಯಿಸಿದ ಸ್ವತಂತ್ರ ಭಾರತ ದೇಶದ ರಕ್ಷಣೆಯು ಈ ಬುದ್ಧಿಜೀವಿವರ್ಗದ ಏಳಿಗೆಗೆ ಮತ್ತು ಆಧುನಿಕ ಮಧ್ಯಮ ವರ್ಗಗಳ ಹುಟ್ಟಿಗೆ ಮೊದಲು ಕಾರಣವಾಯಿತು. ಪ್ರಭುತ್ವದ ಸಕ್ರಿಯ ಮಧ್ಯಪ್ರವೇಶದಿಂದಾಗಿ ಭಾರತದಲ್ಲಿ ಕೈಗಾರೀಕರಣ ನಡೆಯಿತು. ಅಧಿಕಾರಶಾಹಿ ವ್ಯವಸ್ಥೆಯೊಂದಿಗಿನ ಹತ್ತಿರ ಸಂಬಂಧ ಮತ್ತು ಅನುಗ್ರಹ ಮತ್ತು ಲಂಚಗುಳಿತನದ ಜಾಲಗಳ ಉಪಸ್ಥಿತಿಯು ಸಾಕಷ್ಟು ಸಮಯದವರೆಗೆ ಉದ್ಯಮಿಗಳ ಏಳಿಗೆಗೆ ಅಗತ್ಯವೆನಿಸಿತು. ಲೈಸನ್ಸ್ ರಾಜ್ ವ್ಯವಸ್ಥೆಯು ಇನ್ನೂ ಜೀವಂತವಾಗಿದೆ ಹಾಗೂ ಬಳುವಳಿಯಾಗಿ ಪಡೆದಂತಹ ವಸಾಹತುಶಾಹಿ ಮಾದರಿಯ ಶಾಲೆ ಮತ್ತು ಪ್ರಭುತ್ವದ ನಡುವಿನ ಸಂಬಂಧವು ಅಸಮಾನ ಪ್ರಮಾಣದ ಪ್ರಭಾವವನ್ನು ಬೀರುವುದು ಮುಂದುವರೆದಿದೆ. ದೇಶದ ನೈತಿಕ ನಾಯಕತ್ವದಲ್ಲಿ ಮಧ್ಯಮ ವರ್ಗವು ತನ್ನ ವಿಧಿಯ ಕುರಿತು, ಕನಿಷ್ಠ ತನ್ನ ಸ್ಥಾನವನ್ನು ಕುರಿತು, ಹೊಂದಿದ್ದ ವಿಶ್ವಾಸವು, ಪ್ರಭುತ್ವದ ಕೊಡುಗೆಯಲ್ಲಿ ತನ್ನ ಪಾಲನ್ನು ಉಳಿಸಿಕೊಳ್ಳುವ ಮತ್ತು ಹೆಚ್ಚಿಸಿಕೊಳ್ಳುವ ಶಕ್ಯತೆಯ ಮೇಲೆ ನಿಂತುಕೊಂಡಿದೆ.

ಪ್ರಭುತ್ವ ಮತ್ತು ಅದರ ಅಂಗಸಂಸ್ಥೆಗಳು ಹೊಂದಿದ್ದ ಹಳೆಯ ರೀತಿಯ ಸಾಂಸ್ಕೃತಿಕ ಪ್ರಾಬಲ್ಯವು ಕ್ರಮೇಣವಾಗಿ ಸ್ಥಿತ್ಯಂತರಗೊಂಡಿದ್ದರಿಂದ ಬುದ್ಧಿಜೀವಿವರ್ಗದಲ್ಲಿ ಗೊಂದಲಗಳಿಗೆ ಕಾರಣವಾಯಿತು. ದೀರ್ಘಕಾಲದವರೆಗೆ ಪ್ರಭುತ್ವವು ಸರ್ವೋಚ್ಚ ಮತ್ತು

[1] ಆರ್ಥಿಕ ಅಂಶಗಳನ್ನು ಹೊರತು ಪಡಿಸಿಯು, ಶಿಕ್ಷಣ, ಧಾರ್ಮಿಕ ಇತ್ಯಾದಿ ಕಾರಣಗಳಿಂದ ಸಮಾಜದಲ್ಲಿ ಹೆಚ್ಚಿನ ಗೌರವ. ಪ್ರತಿಷ್ಠೆ ಮತ್ತು ಮನ್ನಣೆಯನ್ನು ಪಡೆಯುವ ಗುಂಪುಗಳನ್ನು ಅಂತಸ್ತಿನ ಗುಂಪು ಎಂದು ಗುರುತಿಸಲಾಗುವುದು.

[2] ವಸಹಾತುಶಾಹಿ ಶಿಕ್ಷಣ ಪಡೆದ ಗುಂಪನ್ನು ಇದು ಸೂಚಿಸುತ್ತದೆ. ಇವರ ಪ್ರಭಾವವು ಸಾಹಿತ್ಯದಲ್ಲೂ ಹೆಚ್ಚಿದ್ದಿತು. ಇವರೇ ಭಾರತದ ಮಧ್ಯಮ ವರ್ಗವಾಗಿಯೂ ರೂಪುಗೊಂಡರು- ಅನುವಾದಕರು.

ಏಕೈಕ ಅಧಿಕಾರವಾಗಿದ್ದುದರಿಂದ ಇದು ಮೂಲಭೂತ ಮಟ್ಟದಲ್ಲಿ ಭಾರತೀಯ ಸಮಾಜವನ್ನು ಅಲುಗಾಡಿಸಲು ಕಾರಣವಾಗಿದೆ.

ಆರ್ಥಿಕತೆಯು ತನ್ನದೇ ಆದ ಅಭಿವೃದ್ಧಿ ಪಥವನ್ನು ಆಯ್ದುಕೊಂಡಿದೆ. ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರಗಳು ಅಭಿವೃದ್ಧಿ ಹೊಂದಿದ್ದು, ಅಧಿಕಾರಿವರ್ಗವು ಕಡತಗಳಲ್ಲಿ ಕೈಚಳಕ ತೋರುವುದಕ್ಕಿಂತಲೂ ಉದ್ಯಮಶೀಲತೆಯೇ ಉನ್ನತ ಆದರ್ಶವೆಂದು ಭಾವಿಸಿವೆ. ಪ್ರಭುತ್ವವು ತನ್ನ ಯಾಜಮಾನ್ಯದ ಸ್ಥಾನವನ್ನು ಕಳೆದುಕೊಳ್ಳುತ್ತಿದೆ ಮತ್ತು ಕಾರ್ಪೊರೇಟ್ ಮಾದರಿಯು ಕ್ರಮೇಣ ಅಧಿಕಾರಶಾಹಿಯ ಮೊಗಸಾಲೆಗಳಲ್ಲಿಯೂ ಸಹ ಪ್ರಭಾವ ಬೀರಲು ಆರಂಭಿಸಿದೆ. 'ಸುಶಿಕ್ಷಿತ' ಎನ್ನುವ ಮುದ್ರೆಯು ಯಶಸ್ಸಿಗೆ ಅಗತ್ಯವಾದರೂ, ಹೊಸ ಐಡಿಯಾಲಜಿಗಳು ಮತ್ತು ಸಂಕೇತಗಳ ಸಮುಚ್ಚಯವು ಹಳೆಯವುಗಳಿಗೆ ಸವಾಲು ಒಡ್ಡುತ್ತಿವೆ. ಇನ್ನೊಂದು ಕಡೆ, ಈ ನಡುವೆ, ಹಸಿರು ಕ್ರಾಂತಿಯಿಂದ ಕೃಷಿಕ ವರ್ಗದ ಚೌಕಾಸಿ ಮಾಡುವ ಶಕ್ತಿಯು ಅಧಿಕವಾಗಿದೆ. ವಿಶೇಷವಾಗಿ, ದೊಡ್ಡ ಕೃಷಿಕರ ಲಾಬಿಯು ರಾಜಕೀಯ ರಂಗದಲ್ಲಿ ಸಕ್ರಿಯವಾಗಿದೆ ಮತ್ತು ಬಹಳ ಮುಕ್ತವಾಗಿಯೇ ಅಭಿವ್ಯಕ್ತಗೊಂಡಿದೆ.[3] ಸಾಂಸ್ಕೃತಿಕ ಶಕ್ತಿಯ ಅನೇಕ ಹೊಸ ಮೂಲಗಳು ಅಭಿವೃದ್ಧಿ ಹೊಂದಿದ ಕಾರಣ, ನೈತಿಕ ಧರ್ಮನಿಷ್ಠೆಯ ಮೇಲೆ ಬುದ್ಧಿಜೀವಿವರ್ಗವು ಹೊಂದಿದ್ದ ಹಿಡಿತವು ಸಡಿಲಗೊಂಡಿದೆ. ಹಳೆಯ ಸಂಕೇತಗಳ ಮರುವ್ಯಾಖ್ಯಾನ ಮಾಡಲಾಗುತ್ತಿದೆ ಮತ್ತು ಹೊಸ ಸಂಕೇತಗಳನ್ನು ಸೃಷ್ಟಿಸಲಾಗುತ್ತಿದೆ. ಇಂಗ್ಲಿಷ್ ಭಾಷೆಯ ಪ್ರಾಬಲ್ಯ ಮತ್ತು ದೊಡ್ಡ ನಗರಗಳ ಜನರ ಹೆಮ್ಮೆಗೆ ಸವಾಲೊಡ್ಡಲು ಸ್ಥಳೀಯ ಮತ್ತು ಪ್ರಾದೇಶಿಕ ಭಾಷೆಗಳನ್ನು ಬಳಸಲಾಗುತ್ತಿದೆ. ಹಳೆಯ ರಾಷ್ಟ್ರೀಯ ಉನ್ನತವರ್ಗದ ಸೋಗಿನ ಬೌದ್ಧಿಕ ನಿಲುವಿನ ನಿಜಸ್ವರೂಪವನ್ನು ಬಯಲಿಗೆಳೆಯುವಲ್ಲಿ ಸಾಹಿತ್ಯಕ ಗುಂಪುಗಳು ಧ್ವನಿ ಎತ್ತಿವೆ.

ಪರಸ್ಪರ ಸ್ಪರ್ಧಿಸುವ ಅನೇಕ ಬಣಗಳ ಉದಯವು ಬುದ್ಧಿಜೀವಿವರ್ಗದ ನೆಮ್ಮದಿಗೆ ಭಂಗ ತಂದಿದೆ. ಅವರ ಅರ್ಹತೆ, ಕಠಿಣ ಶ್ರಮ ಮತ್ತು ತಾಂತ್ರಿಕ ಸಾಮರ್ಥ್ಯದ ಅಧಿಕೃತ ಐಡಿಯಾಲಜಿಯು, ಅಧಿಕಾರದಲ್ಲಿ ಕೈಚಳಕ ತೋರಿಸುವ ಸಾಮರ್ಥ್ಯ ಗಳಿಸಲಾರಂಭಿಸಿದೆ, ಅಂತಸ್ತಿನ ಗುಂಪು (status group) ಬೆಳವಣಿಗೆಯ ಹಿನ್ನೆಲೆಯಲ್ಲಿ ಬಯಲಾಗಿದೆ. ಪ್ರಭುತ್ವ ಹಾಗೂ ಸಾರ್ವಜನಿಕ ಬದುಕನ್ನು ರೂಪಿಸಬೇಕಾದ ಸಾಮಾಜಿಕ ಸಂಘಟನೆಗಳ ಕುರಿತು ವಿಭಿನ್ನ ಕಲ್ಪನೆಗಳು ಪ್ರವರ್ಧಮಾನಕ್ಕೆ ಬಂದಿವೆ. ಈ ಬುದ್ಧಿಜೀವಿವರ್ಗವು ಪ್ರಭುತ್ವದ ಬೆಳವಣಿಗೆಯೊಂದಿಗೆ ಅಧಿಕಾರಕ್ಕೆ ಬಂದಿತು ಮತ್ತು ಪ್ರಭುತ್ವವು ಕ್ರಮೇಣ ಹಿಂದಕ್ಕೆ ಸರಿದ ಕಾರಣ ಈ ವರ್ಗವು ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡಿದೆ. ಹಾಗೂ ಅವರ ಕಾಲದ ಬದಲಾವಣೆಗೆ ಪ್ರತಿಕ್ರಿಯೆಯಾಗಿ ಇರುವುದು ಒಂದೇನೆಂದರೆ, ಪ್ರಭುತ್ವದ ಐಡಿಯಾಲಜಿಯನ್ನು ಶಾಲಾ ಪಠ್ಯಪುಸ್ತಕದ ಪೌರನೀತಿಯ ಮೂಲಕ ಪ್ರಸ್ತುತಪಡಿಸುವುದನ್ನು ಬಲಪಡಿಸಲು ಕರೆನೀಡಿರುವುದು.

## ಶಾಲಾ ಪಠ್ಯಪುಸ್ತಕದ ಪೌರನೀತಿಯ ಸಾಮಾಜಿಕ ಮತ್ತು ಐತಿಹಾಸಿಕ ಮೂಲಗಳನ್ನು ಸ್ಪಷ್ಟಪಡಿಸುವುದು

ಭಾರತದಲ್ಲಿ ಬದಲಾಗುತ್ತಿರುವ ಸಾರ್ವಜನಿಕ ವರ್ತನೆಯ ರಚನೆಗಳನ್ನು, ಅಂದರೆ ಸಂರಚನೆಯ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ಇಲ್ಲಿ ಪ್ರಭಾವಿಸುತ್ತಿರುವ ಮೂಲ ಶಕ್ತಿಗಳು ಯಾವುವು ಎಂಬುದರ ಬಗ್ಗೆ ಆಳವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಮೂಲತಃ,

[3] ಉದಾಹರಣೆಗೆ ನೋಡಿ. ದೀಪಂಕರ ಗುಪ್ತಾ, 1997, , *Rivalry and Brotherhood: Politics in the Life of Farmers in Northern India* ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

ಭಾರತದಲ್ಲಿನ ಪೌರನೀತಿಯು, ನಮ್ಮ ರೀತಿಯದಾದ ಪ್ರಭುತ್ವವು ತನ್ನ ನಾಗರಿಕರಿಂದ ನಿರೀಕ್ಷಿಸುವ ಸಾರ್ವಜನಿಕ ವರ್ತನೆಯ ಲೋಕದೃಷ್ಟಿಯನ್ನು ಹರಡುವುದಾಗಿತ್ತು. ಸಾರ್ವಜನಿಕ ಬದುಕಿಗೆ ಸಂಬಂಧಿಸಿದಂತೆ ವಸಾಹತುಶಾಹಿಯಿಂದ ಬಳುವಳಿಯಾಗಿ ಪಡೆದಂತಹ ಪ್ರಮುಖ ಅಂಶಗಳೆಂದರೆ: ಮೊದಲಿಗೆ, ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಧಿಕಾರ ಹಂಚಿಕೊಳ್ಳುವ ಮತ್ತು ನಿಯಂತ್ರಿಸುವ ಮೂಲಭೂತ ವಿಧಾನವನ್ನಾಗಿ ಸ್ವೀಕರಿಸಿದ್ದು; ಎರಡನೆಯದಾಗಿ, ಸಾರ್ವಜನಿಕ ಸಂಸ್ಥೆಗಳು ಕಾರ್ಯನಿರ್ವಹಿಸಲು ಅಧಿಕಾರಶಾಹಿಯನ್ನು ಸಾಮಾಜಿಕ ಸಂಸ್ಥೆಯ ಮೂಲ ವಿಧಾನವನ್ನಾಗಿ ಒಪ್ಪಿಕೊಂಡದ್ದು; ಮತ್ತು ಮೂರನೆಯದಾಗಿ, ಸರ್ಕಾರ ಬೆಂಬಲಿತ ಬಂಡವಾಳಶಾಹಿ ವ್ಯವಸ್ಥೆಯನ್ನು ಆರ್ಥಿಕ ಬೆಳವಣಿಗೆಗೆ ಮೂಲ ವಿಧಾನವನ್ನಾಗಿ ಸ್ವೀಕರಿಸಿದ್ದು. ಇವು ಪ್ರತಿಯೊಂದೂ ಶಾಲಾಪಠ್ಯಪುಸ್ತಕದ ಪೌರನೀತಿಯ ರಚನೆಗೆ ತಮ್ಮ ಕೊಡುಗೆಯನ್ನು ನೀಡಿದವು. ಇದೇ ಕಾರಣಕ್ಕಾಗಿ ಇವುಗಳನ್ನು ವಿಶ್ಲೇಷಿಸಬೇಕಾಗುತ್ತದೆ ಹಾಗೂ ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಸ್ವತಂತ್ರ ಭಾರತ ರಾಷ್ಟ್ರದ ಮೂಲವು, ನಮ್ಮ ಹಿಂದಿನ ವಸಾಹತುಶಾಹಿ ಆಳ್ವಿಕೆದಾರರ ಸಾರ್ವಜನಿಕ ನಡವಳಿಕೆಯ ಸಂಪ್ರದಾಯದ ಬೆಳವಣಿಗೆಯನ್ನು ಹೆಚ್ಚಾಗಿ ಆಧರಿಸಿತ್ತು. ಒಂದಷ್ಟು ಮಾರ್ಪಾಡುಗಳೊಂದಿಗೆ ಇಲ್ಲಿ ಅನುಕರಿಸಲಾದ ಬ್ರಿಟೀಷ್ ಸಂಸದೀಯ ಮಾದರಿಯು, ಅವರ ದೇಶದಲ್ಲಿ ಇದ್ದ ಉದಾರವಾದಿ ಪ್ರಜಾತಾಂತ್ರಿಕತೆಯ ಪ್ರಾಬಲ್ಯದ ಪರಿಣಾಮವಾಗಿದೆ. ಇಂಗ್ಲಂಡ್‌ನಲ್ಲಿ ಫ್ರೆಂಚ್ ಕ್ರಾಂತಿಯು ಒಡ್ಡಿದ ಬೆದರಿಕೆ ಮತ್ತು ಕೈಗಾರೀಕರಣಗೊಳ್ಳುತ್ತಿರುವ ದೇಶದ ಪ್ರಕ್ಷುಬ್ಧತೆಯಿಂದ ಬಂಡವಾಳ ಮತ್ತು ವಾಣಿಜ್ಯ ಹಿತಾಸಕ್ತಿಗಳನ್ನು ಕಾಪಾಡುವ ಒಂದು ರಾಜಕೀಯ ತಂತ್ರವಾಗಿ ಉದಾರವಾದವು ಹುಟ್ಟಿಕೊಂಡಿತು. ಬಂಡವಾಳ ಮತ್ತು ದೊಡ್ಡ ಖಾಸಗಿ ಆಸ್ತಿಪಾಸ್ತಿಗಳ ರಕ್ಷಣೆಯನ್ನು ಉಲ್ಬಣಗೊಳ್ಳುತ್ತಿದ್ದ ಪ್ರಜಾತಾಂತ್ರಿಕ ಭಾವನೆಗಳೊಂದಿಗೆ ಸಮನ್ವಯಗೊಳಿಸಲು ಇದು ಪ್ರಯತ್ನಿಸಿತು. ಇದು ಸ್ವಾತಂತ್ರ್ಯದ ಭಾಷೆಯನ್ನು ಮಾತನಾಡಿತಾದರೂ ಬಡತನ ಮತ್ತು ಶೋಷಣೆಯ ವಿರುದ್ಧ ತನ್ನ ಬದ್ಧತೆಯನ್ನು ಬಹಿರಂಗವಾಗಿ ಸಾರಲು ಹಿಂಜರಿಯುತ್ತಿತ್ತು. ಉದಾರವಾದಿ ಪ್ರಜಾತಾಂತ್ರಿಕತೆಯ ವಿಸ್ತರಣೆಯು ಮಾನವನ ಸ್ವಾತಂತ್ರ್ಯದ ವಿಸ್ತರಣೆಯ ಸರಳ ಪ್ರಕ್ರಿಯೆಯಾಗಿ ಮಾತ್ರವಲ್ಲದೆ, ವ್ಯವಸ್ಥೆಯ ವಿರುದ್ಧದ ಪ್ರಬಲ ಅಂಶಗಳನ್ನು ಅದರೊಳಗೆ ಸೇರಿಸಿ ಸಮೀಕರಿಸುವ ಸ್ಥಿರ ಪ್ರಕ್ರಿಯೆಯಾಗಿ ಇದನ್ನು ಅರ್ಥೈಸಿಕೊಳ್ಳುವುದು ಉತ್ತಮ.

ಉದಾರವಾದಿ ಪ್ರಜಾತಾಂತ್ರಿಕತೆಯು ಪ್ರಾತಿನಿಧಿಕ ವ್ಯವಸ್ಥೆಯ ಮೂಲಕ ಕೆಲಸ ಮಾಡುತ್ತದೆ. ಇಡೀ ಸಮೂಹವನ್ನು ಪ್ರತಿನಿಧಿಸಲು ಕೆಲವು ಜನರನ್ನು ಆರಿಸಲಾಗುತ್ತದೆ ಮತ್ತು ಈ ಗಣ್ಯರ ವರ್ಗವು ದೇಶವನ್ನು ಮುನ್ನಡೆಸುತ್ತದೆ. ಉದಾರ ಪ್ರಜಾಪ್ರಭುತ್ವವು ನಿರ್ಧಾರ ತೆಗೆದುಕೊಳ್ಳುವಲ್ಲಿ ಎಲ್ಲರ ಪಾಲ್ಗೊಳ್ಳುವಿಕೆಯ ನಿಜವಾದ ವ್ಯವಸ್ಥೆಗಿಂತ ಹೆಚ್ಚು ಕಾನೂನುಬದ್ಧತೆಯನ್ನು ನಿರ್ಮಿಸುವ ಸಾಧನವಾಗಿದೆ. ಇದು, ಸಮಾಜದ ಅತ್ಯಂತ ಶಕ್ತಿಶಾಲಿ ಪಂಗಡಗಳಿಂದ ನಿಯಂತ್ರಣ ಮತ್ತು ಹೊರಗಿನ ಶಕ್ತಿಶಾಲಿ ವ್ಯಕ್ತಿಗಳನ್ನು ವ್ಯವಸ್ಥೆಯಲ್ಲಿ ವ್ಯವಸ್ಥಿತವಾಗಿ ಒಳಗೊಡಿಸುವ ಕಾರ್ಯವಿಧಾನದ ಮೂಲಕ ಕಾರ್ಯನಿರ್ವಹಿಸುತ್ತದೆ. ಇಂತಹ ರಾಜಕೀಯ ವ್ಯವಸ್ಥೆಯು ವಾಣಿಜ್ಯ ಮತ್ತು ಕೈಗಾರಿಕೆಯ ಬೆಳವಣಿಗೆಗೆ ಸರಿಹೊಂದಿತು. ಬಂಡವಾಳಶಾಹಿ ವ್ಯವಸ್ಥೆಯ ನಿರಂತರ ಏಳಿಗೆಗೆ ಸಮಾಜದ ಬಹುಪಾಲು ವರ್ಗಗಳ ಮುಕ್ತ ಸಹಕಾರ ಬೇಕಿತ್ತು. ಹೀಗೆ ಉದಾರವಾದಿ ಪ್ರಜಾತಾಂತ್ರಿಕತೆಯು, ದೀನದಲಿತರಿಗೆ ನೀಡಿದ ಅನುಕೂಲಗಳ ಹೊರತಾಗಿಯೂ, ಸಮಾಜದ ಅತ್ಯಂತ ಪ್ರಬಲ ವರ್ಗಗಳ ಮೂಲಭೂತ ಯಾಜಮಾನ್ಯದ ಸಾಧನವಾಗಿದೆ.

ಪೌರನೀತಿಯು ಸಹ ಜನರು ತಮ್ಮ ಸ್ವಂತ ಸಂಸ್ಕೃತಿ ಮತ್ತು ಆಕಾಂಕ್ಷೆಗಳನ್ನು ವಿಶದವಾಗಿ ಪರಿಶೀಲಿಸುವುದನ್ನು ತಪ್ಪಿಸುತ್ತಲೇ ಅವರಿಂದ ನಾಮಮಾತ್ರಕ್ಕೆ

ಅನುಮೋದನೆಯನ್ನು ಪಡೆಯುವ ಈ ವಿಧಾನಕ್ಕೆ ಉದಾಹರಣೆಯಾಗಿದೆ. ಪೌರನೀತಿಯ ಪಠ್ಯಪುಸ್ತಕಗಳು ಸ್ಥಳೀಯ ಉಪಕ್ರಮಗಳ ಕುರಿತು ಅಪನಂಬಿಕೆ ವ್ಯಕ್ತಪಡಿಸುವುದಕ್ಕೆ ಗುರುತಿಸಿಕೊಂಡಿದ್ದು, ಅವು ಪ್ರಭುತ್ವದ ಕ್ರಿಯೆಗಳಿಗೆ ಮಾನ್ಯತೆಯನ್ನು ಪಡೆಯುವ ಪ್ರಯತ್ನಗಳಾಗಿವೆ ಅಷ್ಟೇ. ಪ್ರಜಾತಾಂತ್ರಿಕತೆಯ ಹಿಂದಿನ ತಾರ್ಕಿಕತೆಯನ್ನು ಕುರಿತು ಹೆಚ್ಚು ಚರ್ಚೆ ನಡೆಯುವುದಿಲ್ಲ. ಚುನಾವಣಾ ಕಾರ್ಯವಿಧಾನ ಮತ್ತು ಸರ್ಕಾರ ರಚನೆಯ ಕುರಿತು ಮಾತ್ರವಷ್ಟೇ ಮಕ್ಕಳು ಕಲಿಯಬೇಕೆಂದು ನಿರೀಕ್ಷಿಸಲಾಗುತ್ತದೆ. ಹಿತಾಸಕ್ತಿಗಳ ನಡುವಿನ ಸಂಘರ್ಷ, ಪ್ರಮುಖ ಶಕ್ತಿ ಬಣಗಳ ಗುಣವೈಶಿಷ್ಟ್ಯಗಳು ಮತ್ತು ಅಧಿಕಾರಕ್ಕಾಗಿ ಅವರ ಸೆಣಸಾಟ - ಇವೆಲ್ಲವನ್ನು ನಿರ್ಲಕ್ಷಿಸುತ್ತದೆ; ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾವುದೇ ವಿವೇಚನಾಯುಕ್ತ ತೀರ್ಮಾನ ಕೈಗೊಳ್ಳುವಲ್ಲಿ ಅಗತ್ಯವಿರುವುದೆಲ್ಲವನ್ನೂ ಸುದ್ದಿಯಿಲ್ಲದೆ ನಿರ್ಲಕ್ಷಿಸಲಾಗುತ್ತದೆ. ಇದು, ಹಳೆಯ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು ಮತ್ತು ಹೊಸದಾಗಿ ಬಿಡುಗಡೆ ಮಾಡಿದ ಪಠ್ಯಕ್ರಮ ಚೌಕಟ್ಟುಗಳ ಮಾದರಿಯಾಗಿದೆ. ಈ ವಿಚಾರದಲ್ಲಿ ಬಿಜೆಪಿ ಪಕ್ಷವು ಹಳೆಯ ಆಳ್ವಿಕೆಗಳ ಪರಂಪರೆಯನ್ನು ಮುಂದುವರಿಸಿದೆಯಷ್ಟೇ.

ಆಧುನಿಕತೆ ಮತ್ತು ವೈಚಾರಿಕತೆಯು, ಬಂಡವಾಳಶಾಹಿ ವ್ಯವಸ್ಥೆಯ ಏಳಿಗೆಯನ್ನು ಬೆಂಬಲಿಸಿದ ಪ್ರಮುಖ ಸೈದ್ಧಾಂತಿಕ ಶಕ್ತಿಗಳಾಗಿವೆ. ಊಳಿಗಮಾನ್ಯ ವ್ಯವಸ್ಥೆಯನ್ನು ಕಿತ್ತೊಗೆಯಲು ಇವು ಉಪಯುಕ್ತ ಬೆಂಬಲವನ್ನು ನೀಡಿದವು. ತರ್ಕಬದ್ಧತೆ ಮತ್ತು ವಿಜ್ಞಾನ ಎರಡೂ ಚಿಂತನೆಯ ನ್ಯಾಯಸಮ್ಮತ ವಿಧಾನಗಳಾಗಿ ಬೆಳವಣಿಗೆ ಹೊಂದಿ ಹಳೆಯ ಸಾಮಾಜಿಕ ರೂಪಗಳ ಅಡಿಪಾಯಕ್ಕೆ ಸವಾಲು ಒಡ್ಡಿದವು. ಯಾವುದೇ ಜ್ಞಾನವು ನ್ಯಾಯಬದ್ಧವೆಂದು ಕರೆಸಿಕೊಳ್ಳಲು ತರ್ಕಬದ್ಧತೆ ಮತ್ತು ಪ್ರಯೋಗಶೀಲತೆಯ ಮಾನದಂಡವನ್ನು ಪೂರೈಸಬೇಕಿತ್ತು. ತರ್ಕಕ್ಕೆ ಅನುಗುಣವಾಗಿರದ ಅಥವಾ ಮರುಪರಿಶೀಲನೆಯ ಕಠಿಣ ಮಾನದಂಡಗಳಿಗೆ ಅನುಗುಣವಾಗಿ ವೀಕ್ಷಿಸಲು ಆಗದೇ ಇರುವುದನ್ನು ತಿರಸ್ಕರಿಸಲಾಯಿತು. ಸಾರ್ವತ್ರಿಕತೆಯು ಆಧುನಿಕತೆಯ ಕೇಂದ್ರ ಭಾಗವೆನಿಸಿತು. ಯಾರೇ ಪರೀಕ್ಷಿಸಿದರೂ, ಎಲ್ಲೇ ಪರೀಕ್ಷಿಸಿದರೂ ವಿಜ್ಞಾನದ ನಿಯಮವು ಒಂದೇ ಆಗಿರಬೇಕಿತ್ತು. ಇದೇ ರೀತಿ, ಹಕ್ಕುಗಳ ಸಾರ್ವತ್ರಿಕ ಸಂಕಥನದ ಕ್ರಮಬದ್ಧ ಪ್ರತಿಪಾದನೆಯು ಉದಾರವಾದಿ ಪ್ರಜಾತಾಂತ್ರಿಕತೆಯ ಪ್ರಮುಖ ಅಂಶವೆನಿಸಿತು. ಹಕ್ಕುಗಳು ನೈಜವಾದವುಗಳು ಹಾಗೂ ಅವುಗಳ ನಿರ್ದಿಷ್ಟ ಸಂದರ್ಭವನ್ನು ಪರಿಗಣಿಸದೆ ಎಲ್ಲರಿಗೂ ಅನ್ವಯವಾಗುತ್ತದೆ ಎಂದು ಸಾರಲಾಯಿತು.

ಶ್ರೀಮಂತರು ಮತ್ತು ಶಕ್ತಿಶಾಲಿ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡಬೇಕಾದ ಅಗತ್ಯತೆಯು ಸಾಮಾಜಿಕ ತತ್ವಗಳ ನಿಯಮಬದ್ಧಗೊಳಿಸುವಿಕೆಯ ಹಿಂದಿದ್ದ ಉದ್ದೇಶವಾಗಿತ್ತು. ರಕ್ಷಣಾತ್ಮಕ ಹಕ್ಕುಗಳಿಗೆ ಪ್ರಾಮುಖ್ಯ ನೀಡುವುದು ಉದಾರವಾದದ ಒಂದು ಮುಖ್ಯ ಅಂಶವೆನಿಸಿತ್ತು. ಇದರ ಸಂಕಥನವು, ವ್ಯಕ್ತಿ ಆಧಾರಿತ ಹಕ್ಕುಗಳ ರಕ್ಷಣೆಯ ಮೇಲೆ ಕೇಂದ್ರೀಕರಿಸಿತ್ತೇ ಹೊರತು, ಅಧಿಕಾರದ ಪರಿಣಾಮಕಾರಿ ಹಂಚಿಕೆಯ ಮೇಲಲ್ಲ. ಹೀಗಾಗಿ, ಆಸ್ತಿಯ ಹಕ್ಕು ಉದಾರವಾದಿ ಚಿಂತನೆಯ ಭದ್ರಕೋಟೆಯಾಗಿದೆ. ಉದಾರವಾದಿ ಪ್ರಜಾತಾಂತ್ರಿಕ ಪ್ರಭುತ್ವದ ಮೂಲ ಸವಾಲು, ಅದರ ನಾಗರಿಕರ ಈ ಹಕ್ಕುಗಳನ್ನು ರಕ್ಷಿಸುವುದಾಗಿತ್ತು. ಭಾರತದಲ್ಲಿ, ಸಮಕಾಲೀನ ಪೌರನೀತಿಯ ವಿರೋಧಾಭಾಸ ಏನೆಂದರೆ, ಇದು ಪ್ರಜಾತಾಂತ್ರಿಕತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಮೂಲಭೂತವಾಗಿ ಪ್ರಜಾತಂತ್ರಕ್ಕೆ ಅನುಗುಣವಾಗಿರದ ರೀತಿಯಲ್ಲಿ ಕಲಿಸುತ್ತದೆ. ಈ ತತ್ವಗಳು ಚರ್ಚೆ ಅಥವಾ ವಿಚಾರ ಮಂಡನೆಗೆ ತೆರೆದುಕೊಳ್ಳಲು ಅವಕಾಶ ನೀಡದು. ಮಕ್ಕಳಿಗೆ, ಅವರೆಲ್ಲರೂ ಸ್ವತಂತ್ರರು, ಆದರೆ ಅವರಿಗೆ ಏನು ಕಲಿಸಲಾಗಿದೆಯೋ ಅದನ್ನು ವಿಮರ್ಶೆ ಮಾಡುವ ಅಥವಾ ಪ್ರಶ್ನಿಸುವ ಸ್ವತಂತ್ರವಿಲ್ಲ ಎಂದು ಕಲಿಸಲಾಗುತ್ತದೆ. ಕೆಲವೊಮ್ಮೆ ಪಠ್ಯಪುಸ್ತಕವು ಮುಕ್ತ ಪ್ರಶ್ನೆಗಳನ್ನು ಕೇಳಲು ಸೂಚಿಸಿದರೂ, 'ಸರಿಯಾದ' ಉತ್ತರವನ್ನಷ್ಟೇ ಪುರಸ್ಕರಿಸಬೇಕು ಎಂಬುದನ್ನು ಸರ್ವಾಧಿಕಾರಿ ಧೋರಣೆಯ ಶಾಲಾ ವ್ಯವಸ್ಥೆಯು ಖಾತರಿಪಡಿಸುತ್ತದೆ.

ಸಾಮಾಜಿಕ ಸಂಘಟನೆಗಳಲ್ಲಿ ಆಧುನಿಕತೆ ಮತ್ತು ವೈಚಾರಿಕತೆಯ(reason) ಅಭಿವ್ಯಕ್ತಿಯು ಅಧಿಕಾರಶಾಹಿಯು ಒಂದು ಸಾಮಾಜಿಕ ರೂಪವಾಗಿ ಹೊರಹೊಮ್ಮಿದುದರಲ್ಲಿ ಸುಸ್ಪಷ್ಟವಾಗಿ ಕಾಣಿಸಿಕೊಂಡಿತು. ಅಲ್ಲದೆ ಪೌರನೀತಿಯ ಬೋಧನೆಯು ಹೆಚ್ಚಾಗಿ ಪ್ರಭುತ್ವದ ಅಧಿಕಾರಶಾಹಿಯ ಸಂಸ್ಥೆಯ ಬಗ್ಗೆ ಆಗಿರುತ್ತದೆ (ಜೈನ್ (Jain) ಮತ್ತು ಮದನ್ (Madan) 1995). ನಿಯಮಗಳ ದೊಡ್ಡ ಕಂತೆಯನ್ನು, ಸರ್ಕಾರವನ್ನು ಹೇಗೆ ಚುನಾಯಿಸಲಾಗುತ್ತದೆ ಎಂಬುದನ್ನು ಹಾಗೂ ಇದನ್ನು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವಾಗಿ ಹೇಗೆ ವಿಂಗಡಿಸಲಾಗುತ್ತದೆ ಎಂದು, ಸಾರ್ವಜನಿಕ ಕಲ್ಯಾಣಕ್ಕೆ ಇದು ಹೊಂದಿರುವ ಯೋಜನೆಗಳು ಯಾವುವು ಇತ್ಯಾದಿಗಳನ್ನು ಮಕ್ಕಳಿಗೆ ಕಲಿಸಲಾಗುತ್ತದೆ. ಅಧಿಕಾರಶಾಹಿಯ ಸಾಮಾಜಿಕ ವರ್ತನೆಯ ವಿಧಾನವು ಅಂಗೀಕರಿಸಲ್ಪಟ್ಟ ರೂಢಿಗಳು ಮತ್ತು ನಿಯಮಗಳನ್ನು ವೈಯಕ್ತಿಕವಲ್ಲದ ರೀತಿಯಲ್ಲಿ ಅನುಷ್ಠಾನಗೊಳಿಸುವುದಾಗಿರುತ್ತದೆ. ಅಧಿಕಾರಶಾಹಿ ವಿಧಾನದ ಮೂಲ ಗುಣಲಕ್ಷಣವು ವೈಯಕ್ತಿಕವಲ್ಲದ ರೀತಿಯಲ್ಲಿ, ತನಗೆ ಹೇಳಿದ್ದನ್ನು ಪ್ರಶ್ನಿಸದೆ ಮಾಡುವುದು ಹಾಗೂ ಏನು ಮಾಡಲಾಗುತ್ತಿದೆಯೋ ಅದರಲ್ಲಿ ಯಾವುದೇ ಸ್ವಂತ ವೈಯಕ್ತಿಕ ಆಸಕ್ತಿ ಹೊಂದದೆ ತನ್ನ ಕರ್ತವ್ಯಗಳು ಕಲುಷಿತವಾಗದಂತೆ ಮಾಡುವುದಾಗಿರುತ್ತದೆ. ಇದುವೇ ಸಾಪೇಕ್ಷವಾಗಿ ಪುನರಾವರ್ತಿತ ಕೆಲಸಗಳಲ್ಲಿ ಹೆಚ್ಚಿನ ದಕ್ಷತೆಯನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ. ತಕ್ಷಣವೇ ಮಾಡಬೇಕಾದ ಕೆಲಸದ ಮೇಲೆ ಸಂಪೂರ್ಣ ಗಮನ ಹರಿಸುವುದು ಮತ್ತು ಪ್ರತ್ಯೇಕ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಎಲ್ಲಾ ವೈಯಕ್ತಿಕ ಗುಣಲಕ್ಷಣದ ಕುರುಹುಗಳು ಇಲ್ಲದಂತೆ ಮಾಡಿದಾಗ ಮಾತ್ರ ಅತೀ ಹೆಚ್ಚಿನ ಉತ್ಪಾದಕತೆಯನ್ನು ಸಾಧಿಸಬಹುದು ಎಂಬುದು ರಾಶಿಗಟ್ಟಲೆ ಉತ್ಪಾದನೆಯ ಕಾರ್ಖಾನೆಯಲ್ಲಿ ಪ್ರತಿ ವ್ಯವಸ್ಥಾಪಕ ಮತ್ತು ಕಾರ್ಮಿಕನಿಗೆ ತಿಳಿದಿದೆ. ಅಧಿಕಾರಶಾಹಿ ವಿಧಾನವು, ಅತ್ಯಂತ ಸಂಕೀರ್ಣವೆನಿಸಿದ ಸಮಾಜದ ವಿವಿಧ ಮೂಲೆಗಳಿಂದ ಸಂಪನ್ಮೂಲಗಳನ್ನು ಪಡೆಯಲು, ಸಂಸ್ಕರಿಸಲು ಮತ್ತು ಮರುಹಂಚಿಕೆ ಮಾಡಲು ಅನುವು ಮಾಡಿಕೊಡುತ್ತದೆ. ಸಾಮಾಜಿಕ ವರ್ತನೆಯ ಇದೇ ಪ್ರಕಾರವು, ಸಾಮಾನ್ಯ ಹಾಗೂ ಸಭ್ಯರೆನಿಸಿದ್ದ ಜನರು ಸೆರೆಶಿಬಿರಗಳಲ್ಲಿ (concentration camps) ಲಕ್ಷಾಂತರ ಜನರನ್ನು ಸಾವಿನ ತೆಕ್ಕೆಗೆ ದೂಡುವಂತೆ ಮಾಡಿತು. ಇಂದು ಇದೇ ಪ್ರವೃತ್ತಿಯು ಭಾರತದಲ್ಲಿ ಜನರು ಹಸಿವಿನಿಂದ ಸಾಯುತ್ತಿರಬೇಕಾದರೆ ಗೋಧಿಯ ಹೆಚ್ಚುವರಿ ಚೀಲಗಳನ್ನು ಎಣಿಸುವುದರಲ್ಲಿ ತಲ್ಲೀನವಾಗಿದೆ.

ಅಧಿಕಾರಶಾಹಿ ವಿಧಾನ, ಆಧುನಿಕತೆ, ಬಂಡವಾಳಶಾಹಿ ವ್ಯವಸ್ಥೆ ಮತ್ತು ವೈಚಾರಿಕತೆ, ಇವೆಲ್ಲವುಗಳಿಗೆ ಸಾರ್ವತ್ರೀಕರಣಗೊಳಿಸುವ ಪ್ರವೃತ್ತಿಯು ಒಂದು ಪ್ರೇರಕ ಶಕ್ತಿಯಾಗಿದೆ. ಇದು ವಿಶಿಷ್ಟವಾದವುಗಳನ್ನು ದೊಡ್ಡದಾದ ಅಮೂರ್ತ ಕಲ್ಪನೆಗಳಲ್ಲಿ ಅಂತರ್ಗತವಾಗಿಸುತ್ತದೆ; ಮತ್ತು ಅದರೊಳಗಿನ ವಿಶಿಷ್ಟವಾದವುಗಳನ್ನು ಇನ್ನೂ ಹೆಚ್ಚು ಅಮೂರ್ತ ಸೂತ್ರೀಕರಣಗಳಲ್ಲಿ ಅಂತರ್ಗತವಾಗಿಸುತ್ತದೆ. ಸಾರ್ವತ್ರಿಕತೆಯು ಎರಡು ಅಲಗಿನ ಕತ್ತಿಯಾಗಿದೆ. ಒಂದೆಡೆ ನಿರ್ದಿಷ್ಟತೆಗಳಿಂದ, ಪ್ರಸ್ತುತದಲ್ಲಿನ ಶೋಷಣೆಗಳಿಂದ ಮನುಷ್ಯನನ್ನು ಮುಕ್ತಗೊಳಿಸಿ ಅದನ್ನು ವಿಸ್ತಾರವಾದ ಸಮಷ್ಟಿಗಳೊಂದಿಗೆ ಬೆಸೆಯುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು, ನಮ್ಮನ್ನು ಊಳಿಗಮಾನ್ಯ ವ್ಯವಸ್ಥೆಯ ದೊರೆಗಳ ನಿರಂಕುಶಾಧಿಕಾರದಿಂದ, ಆಹಾರ ಕೊರತೆಯ ಭೀತಿಯಿಂದ ಮತ್ತು ಪ್ರಕೃತಿಯ ಎದುರು ಮನುಷ್ಯನು ಅನುಭವಿಸುವ ಅಸಹಾಯಕತೆಯಿಂದ ಮುಕ್ತಗೊಳಿಸುತ್ತದೆ. ವೈಚಾರಿಕತೆಯು ನಮ್ಮನ್ನು ಪುರೋಹಿತಶಾಹಿ ವರ್ಗದ ಪ್ರಾಬಲ್ಯದಿಂದ ಮತ್ತು ಭಯಭೀತ ಜನರ ಮೂಢನಂಬಿಕೆಯಿಂದ ಮುಕ್ತಗೊಳಿಸುತ್ತದೆ. ಅಧಿಕಾರಶಾಹಿ ವ್ಯವಸ್ಥೆಯು ನಮ್ಮನ್ನು ಜನಸಮೂಹದ ಅರಾಜಕತೆಯಿಂದ ಮತ್ತು ಬಣ ನಾಯಕನ ಪಕ್ಷಪಾತದಿಂದ ಮುಕ್ತಗೊಳಿಸುತ್ತದೆ.

ಅದೇ ವೇಳೆ, ಸಾರ್ವತ್ರಿಕತೆಯು ಆಳವಾಗಿ ಪರಿಣಾಮ ಬೀರುತ್ತದೆ. ಅಧಿಕಾರಶಾಹಿ ವ್ಯವಸ್ಥೆಯು ಸ್ಥಳೀಯ ಅಗತ್ಯತೆಗಳನ್ನು ನಿರ್ಲಕ್ಷಿಸುತ್ತದೆ ಹಾಗೂ ಸರಿಯಾಗಿ ಹೊಟ್ಟೆಗೆ

ಹಿಟ್ಟಿಲ್ಲದಿದ್ದರೂ ಎಲ್ಲರೂ ಕೇಕ್ ತಿನ್ನಬೇಕೆಂದು ಬಯಸುತ್ತದೆ. ವಿಜ್ಞಾನದ ಪ್ರಾಬಲ್ಯವು ಜ್ಞಾನದ ಇತರ ಯಾವುದೇ ರೂಪವನ್ನು ಅಪಹಾಸ್ಯ ಮಾಡುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು ಸಣ್ಣ ರೈತ ಮತ್ತು ಕುಶಲಕರ್ಮಿಯನ್ನು ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಗೆ ತಳ್ಳುತ್ತದೆ, ಅಥವಾ ಅಸ್ಮಿತೆ ಇಲ್ಲದ, ಜೀವವಿಲ್ಲದ ದಿನಗೂಲಿ ನೌಕರರ ದಂಡಿಗೆ ಸೇರಿಸಿ ಬಿಡುತ್ತದೆ.

ಸಾರ್ವತ್ರಿಕತೆಯ ಸಮಸ್ಯೆ ಏನೆಂದರೆ, ಅಮೂರ್ತೀಕರಣದ ಉನ್ನತ ಮಟ್ಟದಲ್ಲಿ ಇರುವಾಗಲೂ ಇದು ನಿರ್ದಿಷ್ಟ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದನ್ನು ಮುಂದುವರಿಸುತ್ತದೆ. ಜಾಗತೀಕರಣದ ನಿಜವಾದ ಅರ್ಥವೇನೆಂದರೆ ಕೈಗಾರೀಕರಣಗೊಂಡ ರಾಷ್ಟ್ರಗಳ ಪ್ರಾಬಲ್ಯ ಎಂದು ಹೇಳಬಹುದು. ಬಂಡವಾಳಶಾಹಿ ವ್ಯವಸ್ಥೆಯು ಕೆಲವರಿಗೆ ವಿಶೇಷ ಸವಲತ್ತುಗಳನ್ನು ನೀಡಿದರೆ ಉಳಿದವರ ವಿರುದ್ಧ ತಾರತಮ್ಯ ಮಾಡುತ್ತದೆ. ಹೆಚ್ಚಿನ ಅಮೂರ್ತತೆಯತ್ತ ಸಾಗುವತ್ತ ಒತ್ತಡ ಹಾಕುವಲ್ಲಿ ಅಧಿಕಾರವು ನಿರ್ಣಾಯಕ ಅಂಶವಾಗಿ ಹೊರಹೊಮ್ಮುತ್ತದೆ. ವೈಜ್ಞಾನಿಕ ವಾಸ್ತವಾಂಶವೆಂದು ಯಾವುದು ಸ್ವೀಕರಿಸಲಾಗುತ್ತದೋ ಅದು ವಿಜ್ಞಾನದ ಮಾನದಂಡಗಳ ಆಧಾರದ ಮೇಲೆ ಮಾತ್ರವಲ್ಲ, ಯಾವ ವಿಜ್ಞಾನಿ ಹೆಚ್ಚು ಪ್ರಭಾವಶಾಲಿಯಾಗಿದ್ದಾನೆ ಎಂಬುದರ ಮೇಲೆಯೂ ಸಹ ಆಧಾರಿತವಾಗಿರುತ್ತದೆ. ಅಸಮಾನತೆಯ ಹಳೆಯ ಸಂಬಂಧಗಳು ಒಡೆದು ಅಸಮಾನತೆಯ ಹೊಸ ಸಂಬಂಧಗಳಿಗೆ ದಾರಿಮಾಡಿಕೊಡುತ್ತವೆ.

ಆಧುನಿಕ ಕಾಲದಲ್ಲಿ ಮಧ್ಯಮ ವರ್ಗದ ಜನರು ತಮ್ಮನ್ನು ಸತ್ಯವನ್ನು ಧರಿಸಿರುವವರನ್ನಾಗಿ ಕಾಣಲು ಇಷ್ಟಪಡುತ್ತಾರೆ. ಅವರು ಉದ್ಧರಿಸುವ ಸತ್ಯವು, ಅವರು ಈ ಹಿಂದೆ ನಂಬಿದ್ದ ಹಾಗೂ ಪ್ರಸ್ತುತದಲ್ಲೂ ಆಶಿಸುತ್ತಿರುವುದು ಅದೇ ಸಾರ್ವತ್ರೀಕರಣದ ಪ್ರವೃತ್ತಿಯು ಪ್ರಸ್ತಾಪಿಸುವ ಸತ್ಯಗಳಾಗಿರುತ್ತವೆ. ತಿಳುವಳಿಕೆ ಸಾಲದ 'ಜನಸಮೂಹ' ವು ಹೇಗೆ ಬದುಕಬೇಕು, ಯಾವ ರೀತಿ ವರ್ತಿಸಬೇಕು ಮತ್ತು ಹೇಗೆ ಆಳ್ವಿಕೆಗೆ ಒಳಪಡಬೇಕು ಎಂಬುದನ್ನು ಕಲಿಸಲು ಅವರು ಇಷ್ಟಪಡುತ್ತಾರೆ. ಆದಾಗ್ಯೂ, ಅವರ ಪ್ರತಿಯೊಂದು ಆಧಾರ ಪ್ರಮೇಯವು ಐತಿಹಾಸಿಕವಾಗಿ ಸೃಷ್ಟಿಸಿದ್ದಾಗಿದ್ದು ಈಗ ಅದಕ್ಕೆ ಪರಸ್ಪರ ವಿರುದ್ಧವಾಗಿರುವ ಅನೇಕ ವೈಶಿಷ್ಟ್ಯಗಳು ಸವಾಲನ್ನು ಒಡ್ಡುತ್ತಿವೆ. ಭಾರತದ ಪೌರನೀತಿಯ ಪಠ್ಯಕ್ರಮವು ಮೂಲತಃ ಪ್ರಭುತ್ವದ ಆಶ್ರಯದಲ್ಲಿರುವ ಮಧ್ಯಮ ವರ್ಗಗಳು ಕಲಿಸಲು ಇಚ್ಛಿಸುವ ಯೋಜನೆಯಾಗಿದೆ. ಇದರ ಗುಣಲಕ್ಷಣವನ್ನು ಇನ್ನಷ್ಟು ಚೆನ್ನಾಗಿ ಅರಿತುಕೊಳ್ಳಲು ಹಾಗೂ ಇದಕ್ಕೆ ಎದುರಾಗಿರುವ ಸವಾಲುಗಳನ್ನು ಗ್ರಹಿಸಲು, ನಾವೀಗ ಇದಕ್ಕಿರುವ ವಿರೋಧದ ಗುಣವೈಶಿಷ್ಟ್ಯದ ಮೇಲೆ ಗಮನ ಹರಿಸೋಣ.

## ಭಾರತದಲ್ಲಿ ಸಾರ್ವತ್ರಿಕತೆ ಮತ್ತು ಇದಕ್ಕಿರುವ ಸವಾಲುಗಳು

ಪ್ರಸುತ್ತದಲ್ಲಿ ಮುಖ್ಯವೆನಿಸುವ ಹಾಗೂ ವಿಶಿಷ್ಟವಾಗಿ ಇರುವ ಅಂಶಕ್ಕಿಂತ ಇನ್ನೂ ಮಿಗಿಲಿನ ಅಂಶದ ಭಾಗವೆನಿಸಲು ಮಾನವನಿಗೆ ಇರುವ ತೀವ್ರ ಆಸೆಯು, ಮೊದಲಿನಿಂದಲೂ ಭಾರತೀಯ ಸಮಾಜದ ಪ್ರಮುಖ ಎಳೆ ಎನಿಸಿದೆ. ಇದನ್ನು ಧಾರ್ಮಿಕ ಚಿಂತನೆಯಲ್ಲಿ ಬಹಳ ಸ್ಪಷ್ಟವಾಗಿ ಕಾಣಬಹುದು. ಉಪನಿಷತ್ ಮತ್ತು ಬೌದ್ಧ ಸಂಪ್ರದಾಯಗಳು, ಮನುಷ್ಯನನ್ನು ದಿನನಿತ್ಯದ ಬದುಕಿನ ತುರ್ತು ಅಗತ್ಯತೆಗಳನ್ನು ಮೀರಿ ಇನ್ನೇನಾದರೂ ಉನ್ನತ ಹಾಗೂ ಉದಾತ್ತ ಆಕಾಂಕ್ಷೆಗಳನ್ನು ಹೊಂದಲು ಒತ್ತಾಯಿಸಿವೆ. ಭಕ್ತಿ ಮತ್ತು ಸೂಫಿ ಸಂತರು, ಭಗವಂತನನ್ನು ಕಂಡುಕೊಳ್ಳಲು ಅನೇಕ ವಿಭಿನ್ನ ಮಾರ್ಗಗಳು ಇವೆ ಎನ್ನುವುದಕ್ಕೆ ಮತ್ತು ಎಲ್ಲರು ಸಮಾನರು ಎನ್ನುವುದಕ್ಕೆ ಒತ್ತು ನೀಡುವುದರ ಮೂಲಕ ಇದನ್ನು ಇನ್ನಷ್ಟು ಅಭಿವೃದ್ಧಿಪಡಿಸಿದರು. ಆದಾಗ್ಯೂ, ಸಾರ್ವತ್ರಿಕತೆ ಎಂಬುದು ರಾಜಕೀಯ ವ್ಯವಸ್ಥೆಗಿಂತ ಹೆಚ್ಚಾಗಿ ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿತ್ತು. ಭಾರತದ ಪ್ರಜಾರಾಜ್ಯ ವ್ಯವಸ್ಥೆಯೂ ಸಹ ಸಾರ್ವತ್ರೀಕರಣದ ಅನೇಕ ಪ್ರವೃತ್ತಿಗಳನ್ನು ಹೊಂದಿದ್ದವು. ಆದರೆ ಭಕ್ತಿ ಮತ್ತು ಸೂಫಿ

ಬರಹಗಳಲ್ಲಿ ಕಂಡು ಬಂದಷ್ಟು ಪ್ರಮಾಣದಲ್ಲಿ ಇವು ಯಾವುವೂ ವಿಸ್ತೃತ ವಿವರಣೆಯನ್ನು ಹೊಂದಿರಲಿಲ್ಲ.

ಅಧಿಕಾರದ ಸಾಮಾಜಿಕ ಸಂಘಟನೆಯಲ್ಲಿ ಶಕ್ತಿಗಳ ಕ್ರೋಢಿಕರಣವು ಪ್ರಮುಖ ಅಂಶವೆನಿಸಿದೆ. ಅಧಿಕಾರವು ಹೆಚ್ಚಿನ ಅಧಿಕಾರವನ್ನು ಸೃಷ್ಟಿಸಲು ಹಾಗೂ ತತ್ಪರಿಣಾಮವಾಗಿ ಹೆಚ್ಚಿನ ಅಸಮಾನತೆಗಳನ್ನು ಸೃಷ್ಟಿಸಲು ಒಲವು ತೋರಿಸುತ್ತದೆ. ಈ ತರ್ಕವನ್ನು ಅರ್ಥೈಸುವಲ್ಲಿ ಇತಿಹಾಸಜ್ಞರು  ಮತ್ತು ಮಾನವಶಾಸ್ತ್ರಜ್ಞರ ಕೊಡುಗೆಯು ಪ್ರಮುಖವಾಗಿದೆ. ಎಸ್. ಐಸೆನ್‌ಸ್ಟಾಟ್‌ನ ಬರಹಗಳು (ಐಸೆನ್‌ಸ್ಟ್ಯಾಟ್ (Eisenstadt) ಮತ್ತು ಶಾಚರ್ (Shachar) 1987), ಪಟ್ಟಣಗಳು ಅಧಿಕಾರ ಕೇಂದ್ರೀಕರಣದ ತಾಣಗಳು ಎಂದು ಮತ್ತೆ ಮತ್ತೆ ಹೇಳುವ ಮೂಲಕ ಅದರ ಕಡೆ ಗಮನ ಸೆಳೆದಿದೆ. ನಗರೀಕರಣ ಮತ್ತು ಪ್ರತಿ ನಗರೀಕರಣದ (urbanisation and counterurbanisation) ಚಕ್ರಗಳು ವಿಸ್ತೃತವಾಗಿ ಸಾಮಾಜಿಕ ಶಕ್ತಿಯ ಏಕೀಕರಣ ಮತ್ತು ವಿಭಾಗೀಕರಣದ ಚಕ್ರಗಳಾಗಿವೆ. ಮಾನವ ಸಮಷ್ಟಿಗಳು ಒಟ್ಟಿಗೆ ಬರುವುದರ ಮೂಲಕ ಹೊರಹೊಮ್ಮುವ ಸುಖದ ಭ್ರಮೆಯಲ್ಲಿ ನಾವು ಸೃಜನಶೀಲ ಶಕ್ತಿಯ ಅದ್ಭುತ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ. ಅಧಿಕಾರದ ಕೇಂದ್ರೀಕರಣವು ಮಾನವ ಚೈತನ್ಯದ ಅತ್ಯಂತ ಸೃಜನಾತ್ಮಕ ಕ್ಷಣಗಳಿಗೆ ಹಾಗೂ ತನ್ನನ್ನು ತಾನೇ ನಿಯಂತ್ರಿಸುವ ಮತ್ತು ಸಜ್ಜುಗೊಳಿಸುವ ಹೆಚ್ಚಿನ ಪ್ರಯತ್ನಗಳಿಗೆ ಕಾರಣವಾಗಿದೆ.

ಶಿಸ್ತಿನ ಗ್ರಹಿಕೆಯು ಇತ್ತೀಚಿಗೆ ಮಿಶೆಲ್ ಫುಕೋ (Michel Foucault) (1995) ಕೃತಿಗಳೊಂದಿಗೆ ಶೈಕ್ಷಣಿಕ ಸಂಕಥನಕ್ಕೆ ಮರಳಿ ಬಂದಿದೆ. ಶಿಸ್ತಿನ ಮೂಲಕವೇ ಸೇನೆಯನ್ನು ಸಜ್ಜುಗೊಳಿಸಲಾಗುತ್ತದೆ, ಶಾಲೆಗಳನ್ನು ನಡೆಸಲಾಗುತ್ತದೆ ಮತ್ತು ಅಧಿಕಾರವನ್ನು ಕೇಂದ್ರೀಕರಿಸಲಾಗುತ್ತದೆ. ಫುಕೋನ ಕಾಳಜಿಯು ಇದು ಪಾಶ್ಚಾತ್ಯ ನಾಗರಿಕತೆಗಳಲ್ಲಿ ಸೃಷ್ಟಿಸುವ ದಬ್ಬಾಳಿಕೆಗಳ ಮೇಲೆ ಕೇಂದ್ರೀಕೃತವಾಗಿದ್ದರೂ, ಶಿಸ್ತು ಎಲ್ಲಾ ನಾಗರಿಕತೆಗಳಿಗೆ ಅತಿ ಮುಖ್ಯವಾದುದು ಎಂಬುದನ್ನು ಗಮನಿಸಬೇಕಾಗಿದೆ. ಬಹಳ ಜಾಗರೂಕತೆಯಿಂದ ಆಯ್ಕೆ ಮಾಡಲಾದ ಮನೋಭಾವಗಳನ್ನು ನಿಯಂತ್ರಿಸುವುದರ ಮೂಲಕ ಸಮಾಜಗಳು ತಮ್ಮದೇ ಆದ ವಿಶಿಷ್ಟ ಮಾದರಿಯನ್ನು ರಚಿಸುತ್ತವೆ. ಮತ್ತು ಪ್ರಭುತ್ವವು ಎಲ್ಲಕ್ಕಿಂತ ಏಕೈಕ ಅತಿದೊಡ್ಡ ನಿಯಂತ್ರಣ ವ್ಯವಸ್ಥೆಯಾಗಿದೆ.

ಭಾರತದಲ್ಲಿ ರಾಷ್ಟ್ರ ರಚನೆಯ ಪ್ರಕ್ರಿಯೆಗಳು ಇತಿಹಾಸ ಲೇಖನತಜ್ಞರ (ಹಿಸ್ಟಾರಿಯಾಗ್ರಾಫರ್ಸ್) ನಡುವೆ ಗಣನೀಯವಾದ ಚರ್ಚೆಗೆ ಕಾರಣವಾಗಿವೆ.[4] ಅನೇಕ ಹೊಸ ರೂಪಗಳ ಹೊರಹೊಮ್ಮುವಿಕೆಯು ಸಮಾಜದಲ್ಲಿ ಅನಿವಾರ್ಯವಾಗಿ ಹೆಚ್ಚಿನ ಒತ್ತಡ ಮತ್ತು ಅಭದ್ರತೆಗೆ ಕಾರಣವಾಗುತ್ತದೆ. ಪರಿಣಾಮವಾಗಿ ಇದು ಬದಲಾವಣೆ ಎನ್ನುವ  ಬೆಂಕಿಗೆ ಹೆಚ್ಚಿನ ಇಂಧನವನ್ನು ಸುರಿಯುತ್ತದೆ. ಒಂದಾನೊಂದು ಕಾಲದಲ್ಲಿ ಸುವರ್ಣ ಯುಗವಿತ್ತು ಹಾಗೂ ಅದನ್ನು ಈಗ ನಾಶಪಡಿಸಲಾಗಿದೆ ಎನ್ನುವ ಮಿಥ್ಯೆಯು ಮಾನ್ಯತೆ ಪಡೆದುಕೊಳ್ಳುತ್ತದೆ. 'ಸುವರ್ಣ ಯುಗ'ವು ಬದಲಾವಣೆಯ ವ್ಯಾಪಕ ಸ್ವರೂಪವನ್ನು ಹಾಗೂ ಅದಕ್ಕೆ ಅನ್ಯವಾಗಿರುವ (it's other), ಅಂದರೆ ಸುವರ್ಣವಲ್ಲದ ಯುಗಗಳ, ನ್ಯಾಯೋಚಿತತೆಯ ಕೊರತೆಯನ್ನು ಒಳಗೊಳ್ಳುತ್ತದೆ. ವ್ಯಾಪಕ ಕುಸಿತದ ಕಲ್ಪನೆಯು ಉದಯೋನ್ಮುಖ ಹೊಸ ಮಾರ್ಗಗಳಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿರುವಾಗ ವ್ಯಕ್ತಿಯೊಬ್ಬ ತನ್ನ ಕೈಯನ್ನು ಕೊಳೆ ಮಾಡಿಕೊಳ್ಳದೆ ಬದುಕುವುದಾದರೂ ಹೇಗೆ? ಸಮಕಾಲೀನ ಯುಗದ ದುಷ್ಟತೆ ಮತ್ತು ಅನೈತಿಕ ಸ್ವರೂಪವನ್ನು ವಿವರಿಸಲು ಕಲಿಯುಗದ ಪರಿಕಲ್ಪನೆಯ ಜನಪ್ರಿಯತೆಯು ಆಸಕ್ತಿದಾಯಕವಾಗಿದೆ. 'ಕೆಳಸ್ತರದ ಜಾತಿ' ಗಳು ಮತ್ತು ಬ್ರಾಹ್ಮಣೇತರ ವ್ಯವಸ್ಥೆಗಳ ಉಗಮವು

[4] ಚರ್ಚೆಯ ಪ್ರಮುಖ ಅಂಶಗಳು ಈ ಸಂಕಲನದಲ್ಲಿ ಪ್ರಕಟವಾಗಿದೆ: ಹರ್ಮನ್ ಕುಲ್ಕ್ (ಸಂ.), The State in India: 1000-1700, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ

ವರ್ಣ ವ್ಯವಸ್ಥೆಗೆ ಗಂಭೀರವಾದ ಬೆದರಿಕೆ ಒಡ್ಡಿದ ಸಂದರ್ಭದಲ್ಲಿ, ಕ್ರಿಸ್ತಶಕದ ಮೊದಲ ಸಹಸ್ರಮಾನದ ಪೂರ್ವಾರ್ಧದಲ್ಲಿ ಈ ಪರಿಕಲ್ಪನೆಯನ್ನು ಬಳಸಲಾಯಿತು (ಆರ್ ಎಸ್ ಶರ್ಮಾ (R.S. Sharma) 1982).

ವಿಪರ್ಯಾಸವೆಂದರೆ, ಆತ್ಮ ಗೌರವದ ಪ್ರಜ್ಞೆಯನ್ನು ಪ್ರಚೋದಿಸಲು ಹೆಣಗಾಡುತ್ತಿದ್ದ ಇತಿಹಾಸ ಲೇಖತಜ್ಞರು ತಮ್ಮ 'ಸುವರ್ಣ ಯುಗ' ವಾಗಿ ಈ ಅವಧಿಯನ್ನೇ ಆಯ್ದುಕೊಂಡರು. ಪ್ರಾಚೀನ ಭಾರತವನ್ನು ಕುರಿತು ಇವರು ಸೃಷ್ಟಿಸಿದ ಚಿತ್ರಣವು, ಬ್ರಿಟೀಷ್ ವಸಾಹತುಶಾಹಿ ರಾಷ್ಟ್ರವು ತಮ್ಮ ಶ್ರೇಷ್ಠತೆಯ ಸಂಕೇತಗಳನ್ನು ಪ್ರತಿಪಾದಿಸಲು ಬಳಸಿದ ಗುಣಲಕ್ಷಣಗಳಿಗೆ ತುಂಬಾ ಸಾಮ್ಯತೆಯನ್ನು ಹೊಂದಿತ್ತು. 'ಸಾಂಪ್ರದಾಯಿಕ' ಭಾರತವನ್ನು ಒಂದು ಅಖಂಡವಾದ, ಕೇಂದ್ರೀಯ ಆಡಳಿತ ಹೊಂದಿದ್ದ ಘಟಕವನ್ನು ಒಬ್ಬ ಪ್ರಬಲ ಆಡಳಿತಗಾರನು ಆಳುತ್ತಿದ್ದ ಪ್ರಭುತ್ವವೆಂದು ಪರಿಗಣಿಸಲಾಗಿತ್ತು.

ಸಾಮಾಜಿಕ ಬದುಕಿಗೆ ಸಂಬಂಧಿಸಿದಂತೆ ಒಂದು ಸಂಗತಿ ಅಸ್ತಿತ್ವದಲ್ಲಿ ಇದೆಯೇ ಇಲ್ಲವೇ ಎಂಬುದು ಪರಿಗಣನೆಗೆ ಬರುವುದಿಲ್ಲ. ಪ್ರಾಚೀನ ಭಾರತದ ಚಿತ್ರಣದಲ್ಲಿ ವಸಾಹತುಶಾಹಿಗಳ ಈ ಸ್ವಯಂ ಚಿತ್ರಣವು ಪ್ರತಿಫಲಿಸುವುದನ್ನು ಗಂಭೀರ ಇತಿಹಾಸಕಾರರು ಸ್ವೀಕರಿಸುತ್ತಿಲ್ಲ. ಸತ್ಯಾಂಶಗಳು ಏನೇ ಇರಲಿ, ಸಮಕಾಲೀನ ಭಾರತದಲ್ಲಿ ಸ್ಥಿರತೆ ಹಾಗೂ ವ್ಯವಸ್ಥೆಯ ಮಿಥ್ಯೆಗಾಗಿ ತಡಕಾಡುತ್ತಿರುವ ಅನೇಕರು ಅಸ್ಮಿತೆಗಳ ಪುನರ್ ರಚನೆ ಮಾಡುವ ಕೆಲಸವನ್ನು ನಡೆಸುತ್ತಲೇ ಇರುವರು. ಇದು ಅನೇಕ ರೂಪಗಳನ್ನು ಪಡೆದುಕೊಳ್ಳುತ್ತದೆ. ಸಾಮ್ರಾಜ್ಯಶಾಹಿ ಮಾದರಿಯನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಇದಕ್ಕೆ ತೀರ ವಿರುದ್ಧವಾಗಿ ಸ್ಥಿರತೆ ಎಂಬುವ ಮಿಥ್ಯೆಯು ತೆಗೆದುಕೊಳ್ಳಬಹುದಾದ ಇನ್ನೊಂದು ರೂಪವೆಂದರೆ ಉದಾತ್ತ ಗ್ರಾಮಸ್ಥ. ದೀರ್ಘ ಕಾಲದ ತನಕ ಬದಲಾಗದ ಗ್ರಾಮೀಣ ಗಣರಾಜ್ಯವೇ ನಿಜವಾದ ಭಾರತವೆಂದು ಸಂಭ್ರಮಿಸಲಾಗುತ್ತಿತ್ತು. ಕೈಗಾರಿಕೀಕರಣದ ಹರಡುವಿಕೆಯೊಂದಿಗೆ ತಮ್ಮ ಕೃಷಿಕ ಸಮಾಜವು ತರೆದುಕೊಂಡಂತೆ, 19ನೇ ಶತಮಾನದ ಇಂಗ್ಲಿಷ್ ಜನರ ತಲೆಮಾರುಗಳು ಭಾರತದಲ್ಲಿ ಇದನ್ನೇ ಬಯಸಿದವು. ನಂತರ ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧ ಗಾಂಧಿ ಮತ್ತು ಅವರ ಬೆಂಬಲಿಗರು ಈ ವಿಷಯವನ್ನೇ ಮುಖ್ಯ ಕೇಂದ್ರಬಿಂದುವನ್ನಾಗಿ ಆರಿಸಿಕೊಂಡರು. ಬ್ರಿಟೀಷರು ಮತ್ತು ಪ್ರಭಾವಶಾಲಿ ಸ್ಥಳೀಯ ಗಣ್ಯವರ್ಗ ಇಬ್ಬರನ್ನೂ ದುರ್ಬಲಗೊಳಿಸಲು ಸಾರಸಂಗ್ರಹಿಯಾಗಿ ಆಯ್ದ ಸಂಕೇತಗಳ ಮೂಲಕ ಗಾಂಧಿಯು, ಇಬ್ಬರನ್ನೂ ಕಿತ್ತೊಗೆಯಲು, ತಾತ್ವಿಕವಾಗಿ ಆದರೂ, ಬೆದರಿಕೆ ಒಡ್ಡುವ ವಿಶಾಲವಾದ ಚಳವಳಿಯೊಂದನ್ನು ರೂಪಿಸುವಲ್ಲಿ ಯಶಸ್ವಿಯಾದರು. ಈ ಪ್ರಾಚೀನ ವ್ಯವಸ್ಥೆಯ ಹುಡುಕಾಟದ ಸಮಕಾಲೀನ ಸ್ವರೂಪಗಳನ್ನು, ದಬ್ಬಾಳಿಕೆ ನಡೆಸುವ ಪ್ರಭುತ್ವಕ್ಕೆ ಅನ್ಯವಾಗಿರುವ ಸ್ಥಳಿಯತೆಯನ್ನು ಸಂಭ್ರಮಿಸುವ ಚಳುವಳಿಗಳಲ್ಲಿ ಮತ್ತು ಬರಹಗಳಲ್ಲಿ ಕಾಣಬಹುದಾಗಿದೆ. ವಿಷಾದನೀಯವೆಂದರೆ, ವಸಾಹತುಶಾಹಿ ಮತ್ತು ವಸಾಹತೋತ್ತರದ ಪ್ರಭುತ್ವ ಮತ್ತು ಇದು ಸಮಾಜದೊಂದಿಗೆ ಹೊಂದಿರುವ ಸಂಬಂಧಗಳ ಬಗೆಗಿನ ಅವರ ಗಹನವಾದ ವಿಶ್ಲೇಷಣೆಯಷ್ಟೇ ಗಹನವಾಗಿ ದೇಶೀಯ ಅಧಿಕಾರದ ಸ್ಥಳೀಯ ಸಂಸ್ಥೆಗಳು ಮತ್ತು ಪ್ರಭುತ್ವದ ಸ್ಥಳೀಯ ಅರ್ಥೈಸುವಿಕೆಯನ್ನು ಕುರಿತು ಇದೇ ರೀತಿಯ ವಿಶ್ಲೇಷಣೆಯನ್ನು ಮಾಡಲಿಲ್ಲ. ಸ್ಥಳೀಯತೆಯನ್ನು ತನ್ನದೇ ಆದ ವೈರುಧ್ಯಗಳ ಆಧಾರದಲ್ಲಿ ಸೈದ್ಧಾಂತಿಕರಿಸುವ ಪ್ರಯತ್ನಗಳು ತುಂಬಾ ವಿರಳ.

ಮಾರ್ಕ್ಸ್ ವಾದಿ ಇತಿಹಾಸತಜ್ಞರು ಮತ್ತು ಇಂಗ್ಲಿಷ್ ಇತಿಹಾಸತಜ್ಞರು ಬರ್ಟನ್ ಸ್ಟೈನ್ (Burton Stein) ಮತ್ತು ಅವರ ಅನುಯಾಯಿಗಳ ನಡುವಿನ ವಿವಾದವು ಭಾರತದ ಪೂರ್ವ ಆಧುನಿಕ ಅಧಿಕಾರ ರಚನೆಗಳ ಗುಣಲಕ್ಷಣಗಳ ಕುರಿತು ಒಳನೋಟಗಳನ್ನು ಒದಗಿಸುವಲ್ಲಿ ಸಾರವತ್ತಾದ ಮೂಲವೆನಿಸಿದೆ. ಊಳಿಗಮಾನ್ಯ ವ್ಯವಸ್ಥೆಯ ಕುರಿತ ಮಾರ್ಕ್ಸ್ ವಾದಿಗಳ ಸೂತ್ರೀಕರಣ ಮತ್ತು ಬ್ರಿಟಿಷ್ ರಚನಾತ್ಮಕ ಕಾರ್ಯಾತ್ಮಕವಾದಿಗಳ (structural functionalist) ರಾಜಕೀಯ ಮಾನವಶಾಸ್ತ್ರವನ್ನು ಕುರಿತ ಕೊನೆಯ ಕೃತಿಗಳಿಂದ ಪ್ರೇರಿತವಾದ ಬರ್ಟನ್

ಸ್ಟೈನ್ ಅವರ ಖಂಡಾತ್ಮಕ ಪ್ರಭುತ್ವದ ಮಾದರಿಯ ನಡುವಿನ ಭಿನ್ನತೆಗಳು ಪ್ರಾಯಶಃ ಚರ್ಚೆಯು ಸೂಚಿಸುವ ಭೀಷಣತೆಗಿಂತ ಕಡಮೆ ಎಂದು ಹೇಳಬಹುದು. ನಮಗೆ ಯಾವುದು ಮುಖ್ಯವೆಂದರೆ, ಯಾವ ಅಂಶಗಳನ್ನು ಪರಸ್ಪರ ವಿರೋಧಿ ಗುಂಪುಗಳು ಇಷ್ಟವಿಲ್ಲದೆ ಒಪ್ಪಿಕೊಳ್ಳುತ್ತಾರೆ ಎನ್ನುವುದು: ಅದೇನೆಂದರೆ, ಕನಿಷ್ಠ ಕ್ರಿಸ್ತ ಶಕ ಮೊದಲನೇ ಸಹಸ್ರಮಾನದ ಉತ್ತರಾರ್ಧದಿಂದ, ಅತಿದುರ್ಬಲ ಮತ್ತು ಅನೇಕ ವೇಳೆ ಸಾಂಕೇತಿಕ ನಿಯಂತ್ರಣ ಹೊಂದಿದ್ದ ನಾಮಮಾತ್ರವೆನಿಸಿದ ಒಂದು ಉನ್ನತ ಅಧಿಕಾರದ ಅಡಿಯಲ್ಲಿ ಕೇಂದ್ರಿತವಾದ ಸ್ಥಳೀಯ ಅಧಿಕಾರದ ಸಡಿಲ ಮಾದರಿಯು ಅಸ್ತಿತ್ವದಲ್ಲಿತ್ತು ಎಂಬುದು. ರಾಜರು ಮತ್ತು ಚಕ್ರವರ್ತಿಯ ನೇರ ಆಳ್ವಿಕೆಯು ರಾಜಧಾನಿಗೆ ಇರುವ ದೂರ ಹೆಚ್ಚಿದಂತೆ ಸಡಿಲವಾಗುತ್ತಾ ಹೋಗುತ್ತಿತ್ತು ಹಾಗೂ ತಮ್ಮ ಸಾಮ್ರಾಜ್ಯವನ್ನು ನಿಯಂತ್ರಿಸಲು ಅವರು ತಮ್ಮ ಬೆಂಬಲಕ್ಕಾಗಿ ಪ್ರಾದೇಶಿಕ ಪಾಳೇಗಾರರು ಒಟ್ಟಿಗೆ ಬರುವುದನ್ನು ಹೆಚ್ಚಾಗಿ ನೆಚ್ಚಿಕೊಂಡಿದ್ದರು. ಈ ಪಾಳೇಗಾರರು ಇದೇ ಮಾದರಿಯನ್ನು ಪುನರಾವರ್ತಿಸಿದರು. ಅವರು ತಮ್ಮ ಅಧಿಕಾರ ಚಲಾಯಿಸಲು ಸಾಪೇಕ್ಷವಾಗಿ ಸ್ಥಳೀಯವೆನಿಸಿದ ಪಂಗಡಗಳ ನಾಯಕರ ಬೆಂಬಲ ಪಡೆಯುವ ಅಗತ್ಯವಿತ್ತು ಮತ್ತು ಇದು ಹೀಗೆ ಮುಂದುವರಿಯುತ್ತಿತ್ತು. ಒಮ್ಮತದ ಹರಡುವಿಕೆ ಮತ್ತು ಸಾಮ್ರಾಜ್ಯಶಾಹಿ ಸಂಕೇತಗಳ ಪ್ರಾಬಲ್ಯವು ಬಹಳಷ್ಟು ಮಟ್ಟಿಗೆ ಸಾಂಕೇತಿಕ ಕ್ರಮಗಳಿಗೆ ಸೀಮಿತವಾಗಿತ್ತು. ಆದ್ದರಿಂದ, ಸಾಮಾಜಿಕ ವರ್ತನೆಯ ಕುರಿತು ಸಾರ್ವತ್ರಿಕವಾಗಿ ರೂಪಿಸಲಾದ ಪ್ರತಿಪಾದನೆಗಳಿಗೆ ನ್ಯಾಯೋಚಿತತೆಯ ಕೊರತೆ ಇರುವುದು ಹೊಸ ವಿಷಯವೇನಲ್ಲ. ಸಾಪೇಕ್ಷವಾಗಿ ಇತ್ತೀಚಿನದು ಎಂದು ಹೇಳಬಹುದಾದದು ಏನೆಂದರೆ, ಮೂಲತಃ ವೈಯಕ್ತಿಕವಲ್ಲದ ನಿಯಮಗಳ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಾಮಾಜಿಕ ಸಂಸ್ಥೆಗಳ ರಚನೆ. ಇವುಗಳನ್ನು ಮೊಘಲ್ ಸಾಮ್ರಾಜ್ಯದ ಪ್ರಾರಂಭಿಕ ಅಧಿಕಾರಶಾಹಿಗಳಲ್ಲಿ ಮತ್ತು ದೇಶದ ಇತರ ಕೆಲವು ಪ್ರದೇಶಗಳಲ್ಲಿ ನೋಡಬಹುದಾಗಿತ್ತು.

ಬ್ರಿಟೀಷರು ಭಾರತಕ್ಕೆ ಬಂದಾಗ ಮೊಘಲ್ ಸಾಮ್ರಾಜ್ಯವು, ಮುಖ್ಯವಾಗಿ ತನ್ನ ಸೇನೆ ಮತ್ತು ಕಂದಾಯ ಸಂಗ್ರಹ ವ್ಯವಸ್ಥೆಯೊಂದಿಗೆ ಕ್ರಮೇಣ ಒಂದು ವಿಸ್ತೃತ ಅಧಿಕಾರಶಾಹಿ ವ್ಯವಸ್ಥೆಯತ್ತ ಕಾಲಿಡುತ್ತಿತ್ತು. ಕಾಥ್ಯವಾಡ್ ಮತ್ತು ಟ್ರಾವಂಕೂರ್‌ನಲ್ಲಿನ ಇತರ ಪ್ರದೇಶಗಳಲ್ಲಿಯೂ ಸಹ ಅಧಿಕಾರಶಾಹಿ ವ್ಯವಸ್ಥೆಯ ನಿಯಮಗಳನ್ನು ನಾವು ನೋಡಬಹುದಾಗಿದೆ. ಈಸ್ಟ್ ಇಂಡಿಯಾ ಕಂಪನಿಯು ಹೊಸ ಪ್ರದೇಶಗಳನ್ನು ತ್ವರಿತವಾಗಿ ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಸಿದ ಸಮಯದಲ್ಲಿ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆಯು ಬೆಳವಣಿಗೆಯನ್ನು ಕಂಡಿತು.

ಈ ದೇಶೀಯ ಸಾರ್ವತ್ರಿಕವಾದಿ ಸಂಸ್ಥೆಗಳನ್ನು ಸಾಮಾಜಿಕ ಪ್ರಪಂಚದ ವೈಚಾರಿಕತೆಯ ಪ್ರಮುಖ ಹೊಸ ವಕ್ತಾರ ಎನಿಸಿಕೊಂಡ ಬ್ರಿಟೀಷ್ ವಸಾಹತುಶಾಹಿ ಮತ್ತು ಈ ವಸಾಹತುಶಾಹಿಯು ಸ್ಥಾಪಿಸಲು ಪ್ರಯತ್ನಿಸಿದ ಸಂಸ್ಥೆಗಳು ಮತ್ತು ಮಿಥ್ಯೆಗಳು ಪಕ್ಕಕ್ಕೆ ಸರಿಸಿದವು. ಸ್ಥಳೀಯ ಮತ್ತು ಆಮದು ಮಾಡಿದ – ಇವೆರಡರ ಸಾಮಾಜಿಕ ವರ್ತನೆಯ ರೂಪವೆನಿಸಿದ ತರ್ಕಬದ್ಧ ಅಧಿಕಾರಶಾಹಿ ವ್ಯವಸ್ಥೆ ಮತ್ತು ಅದರ ಹಳೆಯ ರೂಪಗಳ ನಡುವಣ ಭಿನ್ನತೆಗಳನ್ನು ಮ್ಯಾಕ್ಸ್ ವೆಬರ್ (Max Weber) ಅವರು ಪಿತೃಪ್ರಭುತ್ವವಾದ (partrimonialism - ಒಬ್ಬ ವ್ಯಕ್ತಿ ಅಥವಾ ರಾಜಪ್ರಭುತ್ವವು ಪ್ರಭುತ್ವದ ಸಂಪನ್ಮೂಲಗಳೆಲ್ಲವನ್ನು (ವೈಯಕ್ತಿಕ ಮತ್ತು ಸಾರ್ವಜನಿಕ ಎನ್ನುವುದರ ನಡುವೆ ವ್ಯತ್ಯಾಸ ಮಾಡದೆ) ವೈಯಕ್ತಿಕ ಎಂದು ಪರಿಗಣಿಸಿ ನಿರುಪಾಧಿಕ ಅಧಿಕಾರವನ್ನು ಹೊಂದಿರುವ ವ್ಯವಸ್ಥೆ) ಎಂಬ ಪರಿಕಲ್ಪನೆಯಲ್ಲಿ ಚೆನ್ನಾಗಿ ಸೆರೆಹಿಡಿದಿದ್ದಾರೆ ಗರ್ಥ್ ಮತ್ತು ಮಿಲ್ಸ್ (Gerth and Mills, 1970).

ಇವುಗಳ ಭಿನ್ನತೆಯು ಅವುಗಳಿರುವ ಸಹಮತತೆಯ ಮೂಲದಿಂದಲೇ ಹೊರಹೊಮ್ಮುತ್ತದೆ. ಅಧಿಕಾರವನ್ನು ಓರ್ವ ವ್ಯಕ್ತಿಯೊಂದಿಗೆ ಮತ್ತು ಆ ವ್ಯಕ್ತಿ ಗುರುತಿಸಿಕೊಂಡಿರುವ ವಿವಿಧ ಸಂಕೇತಗಳೊಂದಿಗೆ ಗುರುತಿಸುವುದನ್ನು ಪಿತೃಪ್ರಭುತ್ವವಾದ

ವ್ಯವಸ್ಥೆಯು ಸೂಚಿಸುತ್ತದೆ. ಇದಕ್ಕೆ ಭಿನ್ನವಾಗಿ ಅಧಿಕಾರಶಾಹಿ ವ್ಯವಸ್ಥೆಯು ಒಂದು ಅಮೂರ್ತ ಕಲ್ಪನೆಯಿಂದ ತನ್ನ ಅಧಿಕಾರವನ್ನು ಪಡೆಯುತ್ತದೆ. ಉದಾಹರಣೆಗೆ, ಇಂಗ್ಲೆಂಡ್‌ನಲ್ಲಿ ಸಾಮಾಜಿಕ ಪಂಗಡಗಳ ಪುನರ್ ವಿನ್ಯಾಸದ ಸರಣಿಯ ಮೂಲಕ ಮೆಲ್ಲನೆ ಆದ ಬದಲಾವಣೆಯನ್ನು ಪರಿಗಣಿಸಿ. ಇದು, ರಾಜ್ಯದ ಮಧ್ಯವರ್ತಿಗಳು ಒಂದನೇ ಚಾರ್ಲ್ಸ್ ರಾಜನಿಗೆ ಸೇವಾಸಕ್ತರಾಗುವುದನ್ನು ಮೆಲ್ಲನೆ ಕೊನೆಗಾಣಿಸುವುದಕ್ಕೆ, ಮತ್ತು ಅದರ ಬದಲಾಗಿ ರಾಜಪ್ರಭುತ್ವದ ಅತ್ಯುನ್ನತ ಅಧಿಕಾರಿಯಾದ ರಾಣಿ ಅಥವಾ ರಾಜ (Crown) ರಿಗೆ ಅಥವಾ ಕಾಮನ್ ವೆಲ್ತ್ ಸಂಸ್ಥೆಗೆ ಇವರು ಸೇವಕರಾಗಲು, ಕಾರಣವಾಯಿತು. ಅಧಿಕಾರಶಾಹಿಯ ಸಾರವೇನೆಂದರೆ, ಸಾರ್ವತ್ರಿಕ ಮತ್ತು ಪರಸ್ಪರ ಬದ್ಧವೆಂದು ಕಲ್ಪಿಸಲಾದ ಅಮೂರ್ತ ವೈಯಕ್ತಿಕವಲ್ಲದ ನಿಯಮಗಳ ಅಡಿ ಕಾರ್ಯನಿರ್ವಹಿಸುವುದಾಗಿದೆ.

ರಾಜಕೀಯ ಮತ್ತು ಸಾಂಸ್ಥಿಕ ಸಂಸ್ಕೃತಿಗಳ ಬಗ್ಗೆ ನಡೆದ ಚರ್ಚೆಗಳಲ್ಲಿನ ಭಿನ್ನಾಭಿಪ್ರಾಯಗಳು ಬಹುಪಾಲಿಗೆ ಭಾರತೀಯ ಶಾಲಾಶಿಕ್ಷಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿಲ್ಲ. ಅಪರೂಪದ ಸಂದರ್ಭಗಳಲ್ಲಿ, ಭಾರತಕ್ಕೆ ಸಂಬಂಧಿಸಿದಂತೆ ಶಾಲಾಶಿಕ್ಷಣ ವ್ಯವಸ್ಥೆಯ ಸ್ಥಾನವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದಾಗ, ವೈಚಾರಿಕತೆ ಮತ್ತು ಪ್ರಭುತ್ವದ ಸಾಂಪ್ರದಾಯಿಕ ಸಂಸ್ಥೆಗಳ ಎಲ್ಲೆಗಳು ಚರ್ಚೆಯ ಮಿತಿಗಳನ್ನು ನಿಗದಿಪಡಿಸುವುದು ಮುಂದುವರೆದಿದೆ. ವಸಾಹತೋತ್ತರದ ಪ್ರಭುತ್ವ ಮತ್ತು ಅದರ ಉದಾರವಾದಿ, ವೈಚಾರಿಕ ಮತ್ತು ಔಪಚಾರಿಕ ನ್ಯಾಯಸಮ್ಮತ ಸಂವಿಧಾನದ ಜೊತೆ ತತ್ವ ಜಿಜ್ಞಾಸೆಯಲ್ಲಿ ತೊಡಗಿಸಿಕೊಳ್ಳುವ ಸಾಮೂಹಿಕ ಸಾಮಾಜಿಕ ಕ್ರಿಯೆಯ ಇತರ ರೂಪಗಳು ಯಾವುವು? ಉದಾರವಾದಿ, ವೈಚಾರಿಕ ಯೋಜನೆಯ ಸಮಾಲೋಚನೆ, ಮಾರ್ಪಾಡುಗಳು ಮತ್ತು ಬುಡಮೇಲು ಮಾಡುವ ಪರಿಚಿತ ಮಾದರಿಗಳಿಗೆ ಅನ್ಯವಾಗಿರುವ ತತ್ವ ಜಿಜ್ಞಾಸೆಗಳು ಯಾವುವು? ಒಂದುವೇಳೆ ಪೌರನೀತಿಯು ಇಲ್ಲಿಯತನಕ ಉದಾರವಾದಿ ಪ್ರಭುತ್ವದ ಸ್ಪಷ್ಟ ಮತ್ತು ಸೂಚ್ಯ ಪಠ್ಯಕ್ರಮವನ್ನು ಕಲಿಸುವುದು ತನ್ನ ಮೂಲಭೂತ ಕೆಲಸ ಎಂದು ಪರಿಗಣಿಸಿದ್ದಲ್ಲಿ, ನಾವು ಅದರ ವಿರುದ್ಧ ಅದಕ್ಕೆ ಅನ್ಯವಾಗಿರುವುದನ್ನು ಕಲಿಸುವುದರ ಕುರಿತು ಸಹ ಸ್ಪಷ್ಟ ನಿರೂಪಣೆಯನ್ನು ಹೊಂದಿರಬೇಕು. ಈ ಪ್ರಕ್ರಿಯೆಯಲ್ಲಿ ಸಾರ್ವತ್ರಿಕ ಸತ್ಯ ಎನ್ನುವ ತನ್ನ ಪ್ರತಿಪಾದನೆಯನ್ನು ಉದಾರವಾದಿ ಪಠ್ಯಕ್ರಮವು ತಾನಾಗಿಯೇ ಕಳೆದುಕೊಂಡು ವಿಸ್ತೃತ ರೂಢಮಾದರಿಗಳಲ್ಲಿ ನೆಲೆಯೂರುವುದಾದರೆ, ಅದು ಹಾಗೆಯೇ ಆಗಲಿ.

## ಭಾರತಕ್ಕೆ ಸಂಬಂಧಿಸಿದಂತೆ ಪೌರ ಶಿಕ್ಷಣದ ಮರುಚಿಂತನೆ

ಬಹುತ್ವದ ಅಸ್ತಿತ್ವವು ಅಗತ್ಯವಾಗಿ ಅನೇಕ ರೀತಿಯ ಶೈಕ್ಷಣಿಕ ಗುರಿಗಳ ಅಸ್ತಿತ್ವವನ್ನು ಸೂಚಿಸುತ್ತದೆ. ಭಾರತಕ್ಕೆ ಪ್ರಸ್ತುತವೆನಿಸುವ ಶಿಕ್ಷಣವನ್ನು ಸೂತ್ರೀಕರಿಸುವಲ್ಲಿ ಇರುವ ಸಮಸ್ಯೆಯು, ಅದು ಪೌರನೀತಿಯನ್ನು ಕಲಿಸುವ ಮೂಲಕವಾಗಿರಲಿ ಅಥವಾ ಬೇರೆ ಯಾವುದೇ ಆಗಿರಲಿ, ಅದು ಅನೇಕ ವೇಳೆ ವಿರೋಧಾಭಾಸದ ಸಾಮಾಜಿಕ ತತ್ವಗಳನ್ನು ಉದ್ದೇಶಿಸುವ ಶಿಕ್ಷಣ ವ್ಯವಸ್ಥೆಯನ್ನು ಕಂಡುಹಿಡಿಯುವ ಸಮಸ್ಯೆಯೂ ಆಗಿದೆ.

ಪ್ರತಿ ಶಿಕ್ಷಣ ವ್ಯವಸ್ಥೆಯೂ, ಯುವ ಮನಸ್ಸುಗಳು ಕೆಲವೊಂದು ಪ್ರಮುಖ ತತ್ವಗಳನ್ನು ಅಂತರ್ಗತಗೊಳಿಸಿಕೊಳ್ಳಬೇಕು ಎನ್ನುವ ಗುರಿಯನ್ನು ಹೊಂದಿರುತ್ತದೆ. ಹೀಗೆ ಅನೇಕ ಸಂಸ್ಕೃತಿಗಳು ಘನತೆ, ಪ್ರಾಮಾಣಿಕತೆ ಮತ್ತು ಕಠಿಣ ಶ್ರಮವನ್ನು ತಮ್ಮ ಶಿಕ್ಷಣದ ಮುಖ್ಯ ಧ್ಯೇಯೋದ್ದೇಶಗಳನ್ನಾಗಿ ಪರಿಗಣಿಸುತ್ತವೆ. ಕೆಲವು, ಚತುರ ವ್ಯಾಪಾರ ಕುಶಾಗ್ರಮತಿಯನ್ನು ತಮ್ಮ ಪ್ರಮುಖ ಉದ್ದೇಶವೆಂದು ಪರಿಗಣಿಸುತ್ತವೆ, ಇನ್ನು ಕೆಲವು ಪ್ರಭಾವಶಾಲಿ ಉಪಸಂಸ್ಕೃತಿಗಳು ಇತರರ ಮೇಲೆ ತಮ್ಮದೇ ಆದ ಸಾಂಸ್ಕೃತಿಕ ಶ್ರೇಷ್ಠತೆಯನ್ನು ಪ್ರತಿಪಾದಿಸುವುದು ಮೂಲಭೂತ ಅವಶ್ಯಕತೆಯಾಗಿದೆ ಎಂದು ಪರಿಭಾವಿಸುತ್ತವೆ. ತಮ್ಮ ಮಕ್ಕಳು ಕನಿಷ್ಠ ಸ್ವಾತಂತ್ರ್ಯ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಬದ್ಧರಾಗಿ ಬೆಳೆಯಬೇಕೆಂದು

ಉದಾರವಾದಿಗಳು ಇಚ್ಛಿಸುತ್ತಾರೆ. ಕೆಲವೇ ಕೆಲವು ಉಪಸಂಸ್ಕೃತಿಗಳಲ್ಲಿ, ಸ್ವತಂತ್ರವಾಗಿ ತರ್ಕಿಸುವುದನ್ನು ಕಲಿಯುವುದಕ್ಕೆ ಹೆಚ್ಚು ಪ್ರಾಮುಖ್ಯ ನೀಡಲಾಗುತ್ತದೆ. ವಿವಿಧ ಸಂಸ್ಕೃತಿಗಳು ಅಥವಾ ಸಂಸ್ಕೃತಿಯೊಳಗಿನ ವಿವಿಧ ಸ್ತರಗಳು ಸ್ಪಷ್ಟಪಡಿಸಿದಂತೆ, ಶಿಕ್ಷಣದ ಗುರಿಯು ಒಂದಷ್ಟು ಅಂತಃಸಂಬಂಧಗಳನ್ನು ಹೊಂದಿರಬಹುದು, ಆದರೆ ಅವುಗಳ ನಡುವೆ ಸಾಮಾನ್ಯವಾಗಿ ಗಂಭೀರವಾದ ವೈರುಧ್ಯಗಳು ಮತ್ತು ಸಂಘರ್ಷಗಳು ಸಹ ಇರುತ್ತವೆ. ಇದನ್ನು ನಿರೀಕ್ಷಿಸ ತಕ್ಕದ್ದೇ. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಗುರಿಗಳ ಮೇಲೆ ಸಾಮಾಜಿಕ ಸಂಬಂಧಗಳು ಮತ್ತು ಸಾಂಸ್ಕೃತಿಕ ರಾಜಕೀಯ ಬಲವಾಗಿ ಪ್ರಭಾವ ಬೀರುತ್ತವೆ. ಶಿಕ್ಷಣವನ್ನು ಒಮ್ಮತದ ಸವಿಯಾದ ಮತ್ತು ಮುಗ್ಧ ಕ್ಷೇತ್ರವನ್ನಾಗಿ ಬಿಂಬಿಸುವ ಶಿಕ್ಷಣದಲ್ಲಿ ಪ್ರಾಬಲ್ಯ ಹೊಂದಿದವರಿಗೆ ಇದು ಸರಿಹೊಂದುತ್ತದೆ. ನಿಜವಾಗಿ ಇದು ಬಹುವಾಗಿ ವೈವಿಧ್ಯ ಹೊಂದಿರಬಹುದು ಮತ್ತು ಸಮಾಜವು ಇತರ ಕ್ಷೇತ್ರಗಳಲ್ಲಿ ಸಂಘರ್ಷಗಳನ್ನು ಬಗೆಹರಿಸುವ ರೀತಿಯಲ್ಲಿಯೇ ಶಿಕ್ಷಣದೊಳಗಿನ ಸಂಘರ್ಷಗಳನ್ನು ಬಗೆಹರಿಸಬಹುದು.

ಪೌರ ಶಿಕ್ಷಣವು ವಿಶೇಷವಾಗಿ ತೊಂದರೆಗೀಡಾದ ಕ್ಷೇತ್ರವಾಗಿದೆ. ಇದು ಸಾರ್ವಜನಿಕ ರಂಗದಲ್ಲಿ ಬದುಕಿನ ಬಗ್ಗೆ ಕಲಿಯುವ ಅವಕಾಶವನ್ನು ಸೂಚಿಸುತ್ತದೆ. ಸಾರ್ವಜನಿಕ ರಂಗವನ್ನು ಜಟಿಲವಾಗಿ ಸ್ಥಳೀಯ ಮತ್ತು ವೈಯಕ್ತಿಕ ರಂಗದಿಂದ ಅಗ್ರಾಹ್ಯ ರೀತಿಯಲ್ಲಿ ಪ್ರತ್ಯೇಕಿಸದಿದ್ದರೂ, ಇದು ಅನೇಕ ಹೊಸ ಸಂಬಂಧಗಳು ಮತ್ತು ತಂತ್ರಗಳನ್ನು ಒಳಗೊಂಡಿದೆ. ಈ ಪ್ರಬಂಧದ ಆರಂಭಿಕ ಭಾಗವು ವಾದ ಮಾಡಿದಂತೆ, ಸಾರ್ವಜನಿಕ ರಂಗದಲ್ಲಿ ಹೇಗೆ ವರ್ತಿಸಬೇಕು ಎನ್ನುವುದನ್ನು ಕುರಿತು ಭಿನ್ನ ಸಾಂಸ್ಕೃತಿಕ ನಿಲುವುಗಳಿವೆ. ಹೀಗಾಗಿ ಭಾರತೀಯ ಪೌರ ಶಿಕ್ಷಣವನ್ನು ಮರುಚಿಂತನೆ ಮಾಡುವುದರಲ್ಲಿ ದುಪ್ಪಟ್ಟು ಸವಾಲುಗಳಿವೆ. (a) ಅಸ್ತಿತ್ವದಲ್ಲಿರುವ ಸಾರ್ವಜನಿಕ ವರ್ತನೆಯ ವಿವಿಧ ರೂಢಮಾದರಿಗಳನ್ನು ಪರಿಗಣಿಸುವುದು ಹೇಗೆ? (b) ಯಾವುದೇ ನಿರ್ದಿಷ್ಟ ರೂಢಮಾದರಿಯೊಂದರ ಮೂಲ ತತ್ವಗಳು ಯಾವುವು ಮತ್ತು ಅವುಗಳನ್ನು ಹೇಗೆ ವಿಶದೀಕರಿಸಿ ಸ್ಪಂದಕವಾದ ಅರ್ಥವನ್ನು ನೀಡಬಹುದು?

ಜನರ ಮನಸ್ಸಿನಲ್ಲಿ ನೀತಿ ನಿಯಮಗಳು ಅಚ್ಚಳಿಯದೆ ಉಳಿಯುವಂತೆ ಮತ್ತು ಅವರನ್ನು ಪ್ರಭುತ್ವದ ವಿಧೇಯ ಪ್ರಜೆಗಳನ್ನಾಗಿ ಮಾಡುವ ಪೌರನೀತಿಯ ಸಾಂಪ್ರದಾಯಿಕ ರೂಪವನ್ನು ಮೀರಿ ನಾವು ನೋಡಬೇಕಾದ ಅಗತ್ಯವಿದೆ. ಭಾರತ ಪ್ರಭುತ್ವದ ಸ್ವಂತ ತಾತ್ವಿಕ ಮೂಲ ಆಧಾರಗಳು ಇದಕ್ಕಿಂತಲೂ ಹೆಚ್ಚಿನ ಅರ್ಥವನ್ನು ಬಯಸುತ್ತವೆ. ನಮ್ಮ ಪ್ರಭುತ್ವವು ಉದಾರವಾದಿ ಮತ್ತು ಸಮಾಜವಾದಿ ತತ್ವಗಳ ಮೇಲೆ ನಿಂತಿದ್ದು ಇವು ಸ್ವಾತಂತ್ರ್ಯ ಮತ್ತು ವೈಚಾರಿಕತೆಯ ಕಲಿಕೆಗೆ ಕರೆ ನೀಡುತ್ತವೆ. ನಮ್ಮ ಶಾಲೆಗಳಲ್ಲಿ ಕಲಿಸುವ ಪೌರನೀತಿಯು ಹೆಚ್ಚು ಸಂದರ್ಭಗಳಲ್ಲಿ ಈ ಆದರ್ಶಗಳನ್ನು ಬೆಂಬಲಿಸುವ ಬದಲಾಗಿ ಇವುಗಳನ್ನು ಬುಡಮೇಲು ಮಾಡುವ ಪ್ರಯತ್ನಗಳಿಗೆ ಕಾರಣವಾಗುತ್ತಿದೆ ಎಂದು ಸಕಾರಣವಾಗಿ ವಾದಿಸಬಹುದು. ಈ ನಡುವೆ, ಭಾರತದಲ್ಲಿ ಸಕ್ರಿಯವಾಗಿರುವ ಇತರ ಸಾಂಸ್ಕೃತಿಕ ವ್ಯವಸ್ಥೆಗಳೂ ಸಹ ಬದುಕಿನ ಶ್ರೀಮಂತಿಕೆಯನ್ನು ಯಾಂತ್ರಿಕ ಔಪಚಾರಿಕ ನಿಯಮಗಳನ್ನಾಗಿ ಮೂರ್ತೀಕರಣ-ಗೊಳಿಸುವುದನ್ನು ಖಂಡಿಸುತ್ತಿವೆ. ಅರ್ಥಪೂರ್ಣ ಬದುಕನ್ನು ಸಂಪ್ರದಾಯಗಳು, ಕರ್ತವ್ಯಗಳು ಮತ್ತು ಉದಾತ್ತ ಆದರ್ಶಗಳ ಮೂಲಕ ರೂಪಿಸಬಹುದೇ ಹೊರತು 'ಕಾನೂನಿ'ನ ಸಂಕುಚಿತ ದೃಷ್ಟಿಕೋನದಿಂದ ಅಲ್ಲ ಎಂದು ಅವು ವಾದಿಸುತ್ತಿವೆ. ಅವು, ಸಾರ್ವಜನಿಕ ಕ್ಷೇತ್ರದಲ್ಲಿ ಬದುಕಿಗೆ ಆಧಾರವಾಗಿ ಮಾಡಬಹುದಾದ ಇತರ ರೀತಿಯ ತತ್ವಗಳು ಮತ್ತು ಚಿಂತನಾ ವ್ಯವಸ್ಥೆಗಳನ್ನು ಮಂಡಿಸುತ್ತಿವೆ. ಹೀಗೆ ಸಾಂಪ್ರದಾಯಿಕ ವಿಧಾನದ ಪೌರನೀತಿಯು ವಿವಿಧ ದಿಕ್ಕುಗಳಿಂದ ದಾಳಿಗೀಡಾಗುತ್ತಿದೆ.

ಹಾಗಾದರೆ ಸಾರ್ವಜನಿಕ ಬದುಕಿಗಾಗಿ ನೀಡಬಹುದಾದ ಹೊಸ ಶಿಕ್ಷಣದ ಕೇಂದ್ರ ಬಿಂದು ಯಾವುದಾಗಿರಬಹುದು? ಇಂತಹ ಕೇಂದ್ರ ಬಿಂದುವನ್ನು ಕಂಡುಕೊಳ್ಳಲು ಹೇಗೆ ಮುಂದುವರಿಯಬೇಕು ಎಂದು ಈ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ಮಂಡಿಸಬಹುದಾಗಿದೆ.

ಬಹುತ್ವದ ಉಪಸ್ಥಿತಿಯಲ್ಲಿ ಎರಡು ರೀತಿಯ ಪ್ರತಿಕ್ರಿಯೆಗಳನ್ನು ಸಾಮಾನ್ಯವಾಗಿ ನೋಡಬಹುದು. ಪಕ್ಷಪಾತದ ದೃಷ್ಟಿಕೋನವನ್ನು ಸ್ಪಷ್ಟವಾಗಿ ವಿವರಿಸಿ ಮತ್ತು ಉಳಿದವುಗಳ ಮೇಲೆ ತನ್ನ ಪ್ರಾಬಲ್ಯವನ್ನು ಹೇಗಾದರೂ ಸಾಧಿಸುವುದು ಒಂದು ರೀತಿಯಾಗಿದೆ. ಇದು ಅತ್ಯಂತ ಜನಪ್ರಿಯ ತಂತ್ರವು. ಆದರೆ ಇದು ಹೇಗೆ ಸುಲಭವಾಗಿ ಸರ್ವಾಧಿಕಾರಿ ವ್ಯವಸ್ಥೆ ಮತ್ತು ಫ್ಯಾಸಿಸಂಗೆ ಅನುವು ಮಾಡಿಕೊಡುತ್ತದೆ ಎಂಬುದನ್ನು ಸ್ಪಷ್ಟವಾಗಿ ನೋಡಬಹುದು. ಇದನ್ನು ನಿಜವಾಗಿಯೂ ಸಾಧಿಸಬಹುದೇ ಎಂಬ ಪ್ರಶ್ನೆಗಳನ್ನು ಪಕ್ಕಕ್ಕಿಟ್ಟಾಗ, ಇಲ್ಲಿ ಇನ್ನೊಂದು ಮೂಲ ಸಮಸ್ಯೆ ಎದುರಾಗುತ್ತದೆ. ಜನರ ಒಂದು ಗಣ ಮಾತ್ರ ಸತ್ಯದ ಸಂಪೂರ್ಣ ಅರಿವನ್ನು ಹೊಂದಿರುತ್ತದೆ ಎಂದು ಸರ್ವಾಧಿಕಾರಿ ವ್ಯವಸ್ಥೆಯು ಭಾವಿಸುತ್ತದೆ. ಇಂತಹ ಜ್ಞಾನ ಮೀಮಾಂಸಾತ್ಮಕ ನಿಲುವನ್ನು ಸ್ವೀಕರಿಸಲಾಗದು. ಪ್ರಾಬಲ್ಯ ಸಾಧಿಸುವ ತಂತ್ರದ ಬಗ್ಗೆ ನಂಬಿಕೆ ಇಲ್ಲದಿರುವುದನ್ನು ವ್ಯಕ್ತಪಡಿಸಲು ತಾತ್ವಿಕ ಪ್ರತ್ಯೇಕತಾ ನೀತಿಯೇ ಸಾಕಷ್ಟು ಆಧಾರ ನೀಡುತ್ತದೆ.

ಇನ್ನೊಂದು ರೀತಿಯ ಪ್ರತಿಕ್ರಿಯೆ ಏನೆಂದರೆ ಅನೇಕ ಪಂಗಡಗಳನ್ನು ದೊಡ್ಡ ಚಿತ್ರಣದ ವಿವಿಧ ಭಾಗಗಳ ಧಾರಕರನ್ನಾಗಿ ನೋಡುವುದು. ಇದು ಮಾನವನ ಹೋರಾಟದ ಹೆಚ್ಚು ನಿಖರವಾದ ನೋಟ ಎಂದು ಹೇಳಬಹುದು. ಇಂತಹ ಬಹು ಸಾಂಸ್ಕೃತಿಕ ಸಿದ್ಧಾಂತದ ಮೂಲತತ್ವ ಶಾಸ್ತ್ರವು, ವಿವಿಧ ದೃಷ್ಟಿಕೋನಗಳು ತೊಡಗಿಸಿಕೊಳ್ಳಬಹುದಾದ ಮತ್ತು ಪರಸ್ಪರರಿಂದ ಕಲಿಯಬಹುದಾದ ತಂತ್ರಗಳಿಗೆ ಕರೆ ನೀಡುತ್ತದೆ. ವಾದಗಳನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಮೂಲ ನಿಯಮಗಳನ್ನು ನಿರೂಪಿಸಬೇಕಾಗುತ್ತದೆ. ಇಲ್ಲಿ ಭಿನ್ನಾಭಿಪ್ರಾಯದ ರಕ್ಷಣೆಯು ಬಹಳ ಮುಖ್ಯವಾಗಿದೆ. ವ್ಯವಸ್ಥೆಯನ್ನು ಬಲವಂತವಾಗಿ ಕಿತ್ತೊಗೆಯಲು ಇಚ್ಛಿಸದ ಎಲ್ಲಾ ಭಿನ್ನಾಭಿಪ್ರಾಯಗಳನ್ನು ವೃದ್ಧಿಯಾಗಲು ಬಿಡಬೇಕು. ಇಂತಹ ಭಿನ್ನಾಭಿಪ್ರಾಯಗಳಿಂದ ನಾವೀನ್ಯಗಳು ಮತ್ತು ಸುಧಾರಣೆಗಳು ಸಾಧ್ಯವಾಗುತ್ತವೆ. ಇದನ್ನು ನಿಗ್ರಹಿಸುವುದು ನಿರಂಕುಶವಾದಿ ವ್ಯವಸ್ಥೆಯ ಅಗತ್ಯತೆಯೇ ಹೊರತು ಪ್ರಜಾತಾಂತ್ರಿಕ ವ್ಯವಸ್ಥೆಯ ಅಗತ್ಯತೆಯಲ್ಲ.

ಅರ್ಥಪೂರ್ಣ ಪೌರ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಾಗಿ ನೋಡಬೇಕಾಗಿದೆ. ವಿವಿಧ ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ಇದು ಕರೆ ನೀಡುತ್ತದೆ. ಅಧಿಕಾರಶಾಹಿಯ ಆದೇಶ ಅಥವಾ ಸಣ್ಣ ಆಯ್ದ ಸಮಿತಿಗಳ ಅನುಮತಿಯನ್ನು ಆಧರಿಸದೆ ಸಮಾಲೋಚನೆ ಮತ್ತು ಚರ್ಚೆಯ ದೊಡ್ಡ ಜಾಲಗಳನ್ನು ಆಧರಿಸಿ ಸಾಂಸ್ಥಿಕ ರಚನೆಗಳನ್ನು ರೂಪಿಸಬೇಕಾಗಿದೆ. ಶಾಲೆಯ ಪಠ್ಯಪುಸ್ತಕಗಳನ್ನು ಪ್ರಭುತ್ವದ ಅಧಿಕಾರಿ ವರ್ಗವು ಬೃಹತ್ ಪ್ರಮಾಣದ ಜನತೆಯ ಎದುರು, ಎಲ್ಲಾ ಒಳಿತನ್ನು ಹೊಂದಿರುವ ಮತ್ತು ಅರಿಯಲು ಅರ್ಹವೆನಿಸಿದನ್ನು ಅಡಕವಾಗಿ (ಚಿಕ್ಕ ಮತ್ತು ಚೊಕ್ಕಾದ ಗುಳಿಗೆಯ ರೂಪದಲ್ಲಿ) ಪ್ರಸ್ತುತಪಡಿಸುವ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಇದರ ವಿರುದ್ಧವಾಗಿ ನಾವು, ಯಾವುದು ಒಳ್ಳೆಯದು ಮತ್ತು ಯೋಗ್ಯವೆನಿಸುವ ಜ್ಞಾನ ಎಂಬುದನ್ನು ಜನರನ್ನು ಕೇಳುವ ಪ್ರಕ್ರಿಯೆಗೆ ಚಾಲನೆ ನೀಡಬೇಕಿದೆ.

ಇದು ಯಾವ ರೀತಿಯಲ್ಲೂ ಸುಲಭದ ಕೆಲಸವಲ್ಲ. ವಿಶೇಷವಾಗಿ ಅಸಮಾನತೆಯಿಂದ ತುಂಬಿದ ಮತ್ತು ಶ್ರೇಣೀಕೃತ ಸಮಾಜದಲ್ಲಿ ಜನರಿಗೆ ಇದು ಕಷ್ಟದ ಕೆಲಸವೆಂದು ತೋರಬಹುದು. ನಮ್ಮ ಪ್ರಜಾತಾಂತ್ರಿಕ ಸಂಸ್ಥೆಗಳು ಇನ್ನೂ ಅರೆಬೆಂದ ಮತ್ತು ಆಗತಾನೇ ರೂಪುಗೊಳ್ಳುತ್ತಿರುವ ಸ್ಥಿತಿಯಲ್ಲಿವೆ. ಸಮಾನತೆ ಎಂದರೇನು ಮತ್ತು ಸಾರ್ವಜನಿಕ ನಿರ್ಣಯ ತೆಗೆದುಕೊಳ್ಳುವುದರಲ್ಲಿ ಮುಕ್ತ ಮತ್ತು ಸಮಾನ ಪಾಲ್ಗೊಳ್ಳುವಿಕೆ ಹೇಗೆ ಸಾಧ್ಯ ಎಂಬುದನ್ನು ಕಂಡುಕೊಳ್ಳಲು ನಾವು ಇನ್ನೂ ಹೆಣಗಾಡುತ್ತಿದ್ದೇವೆ. ಸಾಮಾನ್ಯವಾಗಿ ಒಂದು ನಿರ್ದಿಷ್ಟ ವರ್ಗದ ಅಭಿಪ್ರಾಯವನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುವ ಜನರು ಹೆಚ್ಚು ಸಂದರ್ಭಗಳಲ್ಲಿ ಆ ವರ್ಗದಲ್ಲಿನ ಶಕ್ತಿಶಾಲಿ ಜನರ ಅಭಿಪ್ರಾಯವನ್ನಷ್ಟೇ

ಪ್ರಸ್ತುತಪಡಿಸುತ್ತಾರೆ. ಪ್ರಜಾತಾಂತ್ರಿಕ ಸಮಾಜದ ಪರಿಣಾಮಗಳೆನಿಸುವ ಅಧಿಕಾರದ ಹೆಚ್ಚು ಸಮಾನ ಹಂಚಿಕೆಯು ಅದಕ್ಕೆ ವಿರೋಧಾಭಾಸವಾಗಿ ಅದರ ಅವಶ್ಯಕತೆಯೂ ಸಹ ಆಗಿದೆ. ಇಂತಹ ಸಮಾಜವನ್ನು ಉತ್ತೇಜಿಸಲು ಪ್ರಭುತ್ವವು ಇಷ್ಟು ಮಾತ್ರ ಮಾಡಲು ಸಾಧ್ಯ. ಇದರಿಂದಾಚೆ, ಅಧಿಕಾರದ ಬಲೆಗೆ ಬಿದ್ದು ರಾಜಿ ಮಾಡಿಕೊಳ್ಳದ ಸರ್ಕಾರೇತರ ಸಂಸ್ಥೆಗಳು ಮುಂದಾಳತ್ವ ವಹಿಸಬೇಕಾಗುತ್ತದೆ.

ಸಮಾಜದ ವಿಭಿನ್ನ ದೃಷ್ಟಿಕೋನಗಳನ್ನು ಒಳಗೊಂಡ ಪೌರನೀತಿಯ ಪಠ್ಯಕ್ರಮವನ್ನು ಪ್ರಜಾತಾಂತ್ರಿಕ ಪ್ರಕ್ರಿಯೆಯ ಪರಾಕಾಷ್ಠೆಯ ಮೂಲಕ ಮಾತ್ರವೇ ರೂಪಿಸಬಹುದಾಗಿದೆ. ಇದೇ ವೇಳೆ ಪ್ರಭುತ್ವದ ತನ್ನದೇ ಆದ ಪಠ್ಯಕ್ರಮವನ್ನು ಅದರ ಸಂಸ್ಥೆಗಳ ಅಧಿಕಾರದ ಅನುಕೂಲತೆಯಿಂದ ಜಾರಿಗೊಳಿಸಲಾಗುತ್ತದೆ. ಪ್ರಭುತ್ವದ ಸ್ವರೂಪವು ಬದಲಾಗದೇ ಇದ್ದಲ್ಲಿ, ಅಲ್ಲಿಯ ತನಕ ಪ್ರಭಾವಶಾಲಿ ಎನಿಸಿದ್ದ ಅಧಿಕಾರಶಾಹಿ ವ್ಯವಸ್ಥೆಗಳು ಇಂತಹ ಪಠ್ಯಕ್ರಮಗಳನ್ನು ನಿರ್ಧರಿಸುವುದನ್ನು ಮುಂದುವರಿಸುತ್ತವೆ. ಪ್ರಜಾತಾಂತ್ರಿಕ ಪಠ್ಯಕ್ರಮವನ್ನು ರೂಪಿಸಲು ಹೆಣಗಾಡುತ್ತಿರುವಾಗ ಇದು ನಮ್ಮನ್ನು ಎದೆಗುಂದಿಸಬಾರದು. ಇದನ್ನು ಸಾಧಿಸಲು ಬೇಕಾಗುವ ಅವಕಾಶವನ್ನು ಕಂಡುಕೊಳ್ಳುವುದನ್ನು ಮತ್ತು ಬಳಸುವುದನ್ನು ನಾವು ಮುಂದುವರಿಸಲೇಬೇಕು. ಪ್ರಜಾತಾಂತ್ರಿಕ ಪಠ್ಯಕ್ರಮದ ಅರ್ಥಪೂರ್ಣತೆಯು ಅದನ್ನು ಯಾವುದು ಎತ್ತಿ ಹಿಡಿಯುತ್ತದೆ ಎನ್ನುವುದರಲ್ಲಿ ಇದೆ. ಪ್ರಭುತ್ವ ಮತ್ತು ಆಡಳಿತಶಾಹಿಯ ಅಧಿಕಾರ ಹೇರುವಿಕೆಯಿಂದ ಇದು ಬೆಂಬಲವನ್ನು ಮತ್ತು ಬಲವನ್ನು ಪಡೆಯಬಾರದು, ಬದಲಾಗಿ ಇದು ವಿವಿಧ ರೀತಿಯ ಸಮುದಾಯಗಳಿಂದ ಬೆಂಬಲವನ್ನು ಪಡೆಯಬೇಕು.

ಇದು ಶಾಲಾ ಪಠ್ಯಕ್ರಮದಲ್ಲಿ ಮಾತ್ರ ನಡೆಯುವ ಪ್ರತ್ಯೇಕಿತ ಪ್ರಕ್ರಿಯೆ ಎನಿಸಬಾರದು. ನಿರಂಕುಶವಾದಿ ಶಾಲಾ ವ್ಯವಸ್ಥೆಯು ಮುಚ್ಚಿದ ಬಾಗಿಲುಗಳ ನಡುವೆ ಸ್ವಾತಂತ್ರ್ಯವನ್ನು ಕಲಿಸಲಾರದು. ಶಾಲೆಯ ಸ್ವರೂಪವೂ ಸಹ ಮರುಚಿಂತನೆ ಮತ್ತು ಬದಲಾವಣೆಗೆ ಒಳಗಾಗಬೇಕು. ಇದು ಪ್ರತಿಯೊಬ್ಬ ಶಿಕ್ಷಕನನ್ನು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸಬಲೀಕರಣಗೊಳಿಸಬೇಕು. ಪ್ರಜಾತಾಂತ್ರಿಕ ಶಾಲೆ ಮಾತ್ರ ಪ್ರಜಾತಾಂತ್ರಿಕ ಸಂಸ್ಕೃತಿಯನ್ನು ಕಲಿಸಬಲ್ಲದು. ಫ್ರೆಂಚ್ ಕ್ರಾಂತಿಯ ಚರಿತ್ರೆಯನ್ನು ಕಂಠಪಾಠ ಮಾಡುವುದರ ಮೂಲಕ ಸ್ವಾತಂತ್ರ್ಯವನ್ನು ಕಲಿಯಲಾಗದು. ವಿಚಾರ ಮತ್ತು ಸಂಸ್ಥೆಗಳ ದಬ್ಬಾಳಿಕೆಯೊಂದಿಗೆ ಹೋರಾಡುವುದರ ಮೂಲಕ; ಪ್ರಾಬಲ್ಯವನ್ನು ಕಿತ್ತೊಗೆಯುವ ಮೂಲಕ; ಇತರರ ಸ್ವಾತಂತ್ರ್ಯವನ್ನು ಖಾತರಿಪಡಿಸುವುದು ತನಗಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವಷ್ಟೇ ಮುಖ್ಯ ಎನ್ನುವುದನ್ನು ಕಲಿಯುವ ಮೂಲಕ ಮಾತ್ರವೇ ಇದನ್ನು ಕಲಿಯಬಹುದಾಗಿದೆ. ಇವು ಬಾಯಿಪಾಠ ಮಾಡುವ ಕಾರ್ಯಗಳಲ್ಲ. ಬದಲಾಗಿ ಇವು ಸಾಮಾಜಿಕ ಕ್ರಿಯೆ, ವಿಚಾರ ಮತ್ತು ಅದರ ಅಭ್ಯಾಸದ ಕ್ರಿಯೆಯಾಗಿದ್ದು ಪ್ರಜಾತಾಂತ್ರಿಕತೆಯನ್ನು ಪಾಲಿಸುವ ಮೂಲಕ ಮಾತ್ರವೇ ಇವುಗಳನ್ನು ಕಲಿಯಬಹುದಾಗಿದೆ. ಪೌರನೀತಿಯನ್ನು ಕುರಿತ ಮರುಚಿಂತನೆಯು, ಶಿಕ್ಷಣವು ಹೇಗಿರಬೇಕು ಮತ್ತು ನಮ್ಮ ಶೈಕ್ಷಣಿಕ ಸಂಸ್ಥೆಗಳು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಜೊತೆ ಬೆಸೆದುಕೊಂಡಿದೆ. ಇದಿಲ್ಲದೆ, ನಮ್ಮ ಸಾರ್ವಜನಿಕ ಬದುಕನ್ನು ಅಣಿಗೊಳಿಸಲು ಇರುವ ಅತ್ಯುತ್ತಮ ದಾರಿ ಯಾವುದು ಎಂಬುದನ್ನು ಕಲಿಸಲು ಮತ್ತು ಕಲಿಯಲು ಸಾಧ್ಯವಿಲ್ಲ.

ಪೌರನೀತಿಯ ಕುರಿತ ಮರುಚಿಂತನೆಯು, ನಮ್ಮ ಹಳೆಯ ಸಂಸ್ಥೆಗಳ ಮೇಲೆ ಬಂಡವಾಳಶಾಹಿ ವ್ಯವಸ್ಥೆಯು ಬೀರಿದ ಪ್ರಭಾವವನ್ನು ಅರ್ಥಮಾಡಿಕೊಳ್ಳುವ ಮತ್ತು ಪರ್ಯಾಯ ವ್ಯವಸ್ಥೆಗಳನ್ನು ಕಂಡುಕೊಳ್ಳುವ ಪ್ರಯತ್ನಗಳೊಂದಿಗೆ ಸಂಬಂಧ ಹೊಂದಿದೆ. ಆದ್ದರಿಂದ ಇದು ಕಾಳಜಿಯುಳ್ಳ ಶಿಕ್ಷಣ ತಜ್ಞರು ಮತ್ತು ಪಂಡಿತರ ಒಂದು ಸಣ್ಣ ಗುಂಪಿಗೆ ಮಾತ್ರ ಸೀಮಿತವಾದ ಕೆಲಸವಲ್ಲ. ಇದನ್ನು, ನಮ್ಮ ಸಮಾಜವನ್ನು ಮತ್ತು ಅದರ ಕಾರ್ಯನಿರ್ವಹಣೆಯ ರೀತಿಯನ್ನು ಮರುಶೋಧಿಸುವ ವಿಸ್ತೃತ, ನಾಗರಿಕ ಪ್ರಕ್ರಿಯೆಯ

ಅವಿಭಾಜ್ಯ ಅಂಗವಾಗಿ ನೋಡಬೇಕಾಗಿದೆ. ಪೌರನೀತಿಯ ಕುರಿತ ಮರುಚಿಂತನೆಯು, ದೊಡ್ಡ ಅಣೆಕಟ್ಟುಗಳ ಕುರಿತ ಸಾರ್ವಜನಿಕ ಚರ್ಚೆಯ ಲಕ್ಷಣಗಳು, ದೊಡ್ಡ ಭೂಮಾಲೀಕರ ಪ್ರಾಬಲ್ಯ ಮತ್ತು ಬೃಹತ್ ಪ್ರಮಾಣದ ಬಂಡವಾಳ, ಕಾರ್ಮಿಕ ಸಂಘಟನೆಗಳು ಕಾರ್ಯನಿರ್ವಹಿಸುವ ರೀತಿ, ಪುರಸಭೆಗಳು ಮತ್ತು ಪಂಚಾಯತ್‌ಗಳು ಕಾರ್ಯನಿರ್ವಹಿಸುವ ರೀತಿ ಮುಂತಾದ ವಿಚಾರಗಳಿಗೆ ಸಂಕೀರ್ಣವಾದ ಸಂಬಂಧ ಹೊಂದಿದೆ. ಭಾರತದಲ್ಲಿ ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದಂತೆ ವಿವಿಧ ಪ್ರಕ್ರಿಯೆಗಳ ಬಗ್ಗೆ ಕಾಳಜಿ ಹೊಂದಿರುವ ಎಲ್ಲರೂ ಶಾಲೆಯಲ್ಲಿ ಏನಾಗುತ್ತಿದೆ, ಮುಖ್ಯವಾಗಿ ಪೌರನೀತಿಯನ್ನು ಕಲಿಸುವುದು ಅಂದರೆ ಏನು ಎಂಬುದಕ್ಕೆ ಗಮನ ನೀಡಬೇಕಿದೆ. ಈ ನೆಲದ ಚಹರೆಯನ್ನು ಪ್ರತಿ ದಿನವೂ ರೂಪಾಂತರಿಸುತ್ತಿರುವ ಅನೇಕ ವೈವಿಧ್ಯಮಯ ಹೋರಾಟಗಳೊಂದಿಗೆ ತಳಕು ಹಾಕಿಕೊಳ್ಳಲು ಇದು ಒಂದು ಅವಕಾಶ ಒದಗಿಸುತ್ತದೆ ಎಂಬುದನ್ನು ಅವರು ಒಪ್ಪುತ್ತಾರೆ.

(ಲೇಖಕರು, ತಾವು ಈ ಹಿಂದೆ ಗುರುತಿಸಿಕೊಂಡಿದ್ದ ಏಕಲವ್ಯ ಸಂಸ್ಥೆಗೆ, ಸೌಲಭ್ಯಗಳನ್ನು ಒದಗಿಸುವ ಮೂಲಕ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಿದಕ್ಕಾಗಿ ಮತ್ತು ಈ ಲೇಖನವನ್ನು ಬರೆಯಲು ಅವಕಾಶ ಒದಗಿಸಿದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.)

## ಪರಾಮರ್ಶನೆಗಳು

Eisenstadt, S N and S N Shachar (1987): *Society, Culture and Urbanisation*, Sage, Newbury.

Foucault, Michel (1995 orig 1975): *Discipline and Punish: The Birth of the Prison*, Vintage Books, New York.

Gerth H H and C Wright Mills (1970): *From Max Weber: Essays in Sociology*, Routledge and Kegan Paul, London, pp 296-99.

Jain, Manish (nd): *Evolution of Civics and Citizen in India*, unpublished manuscript.

Madan, Amman (1995): 'Nagarik Shastra ki Pustakon mein Nagrikon ki Chhavi', *Shaikshik Sandarbha*, no 5, May-June, pp 88-92.

Ramanujan, A K (1990): 'Is There an Indian Way of Thinking: An Informal Essay' in McKim Marriott (ed), *India through Hindu Categories*, Sage, New Delhi, pp 41-58.

Sharma, R S (1982): 'The Kali Age: A Period of Social Crisis' in S N Mukherjee (ed), *India: History and Thought*, Suvarnarekha, Calcutta, pp 186-203.

Reviewed work (s)
Source: *Economic and Political Weekly*, Vol. 38, No. 44 (Nov. 1-7, 2003), pp. 4655-4660
Published by: Economic and Political Weekly
Stable URL: http://www.jstor.org/stable/4414220.
Accessed: 07/06/2012 03:51